ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

# ಕನ್ನಡ ಅಭ್ಯಾಸ ಪುಸ್ತಕ

## ಭಾಗ–1

## (ಪರಿಷ್ಕೃತ)

# 6

©KTBS NOT TO BE REPUBLISHED

## ಆರನೆಯ ತರಗತಿ

## 2026–27

ಹೆಸರು : .....................................................................

ಶಾಲೆಯ ಹೆಸರು : .....................................................................

.....................................................................

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,

ಬೆಂಗಳೂರು – 560 085.

# ಆಶಯ ನುಡಿ

"ಶ್ರೇಷ್ಠ ಶಿಕ್ಷಣ ಕೇವಲ ಮಾಹಿತಿಯನ್ನು ಒದಗಿಸುವುದಿಲ್ಲ, ಬದಲಿಗೆ ಅಸ್ತಿತ್ವದಲ್ಲಿರುವ ಎಲ್ಲಾದರೊಂದಿಗೆ ಸಾಮರಸ್ಯದಿಂದಿರುವುದನ್ನು ಕಲಿಸುತ್ತದೆ".

**– ರವೀಂದ್ರನಾಥ್ ಠಾಗೋರ್**

ಪ್ರತಿ ರಾಷ್ಟ್ರದ ಅಭಿವೃದ್ಧಿಯು ಅಲ್ಲಿನ ಶಿಕ್ಷಣದ ಅಭಿವೃದ್ಧಿಯನ್ನು ಅವಲಂಬಿಸಿರುತ್ತದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಕಲಿಕೆಯಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಲು ವಿದ್ಯಾರ್ಥಿಗಳಲ್ಲಿ ಕಲಿಕಾ ಅನುಭವಗಳಿಂದ ಉಂಟಾದ ಕಲಿಕಾ ಫಲವನ್ನು ನಿರೀಕ್ಷಿಸಲಾಗುತ್ತದೆ. ಇದಕ್ಕಾಗಿ ಶಾಲಾ ಶಿಕ್ಷಣ ಇಲಾಖೆ ನಿರಂತರವಾಗಿ ಹಲವಾರು ಉಪಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನ ಮಾಡುತ್ತಿದೆ.

2021ನೇ ಸಾಲಿನಲ್ಲಿ DSERT ಕಛೇರಿ ವತಿಯಿಂದ ಸಿದ್ದಪಡಿಸಿರುವ 4 ರಿಂದ 9ನೇ ತರಗತಿಯ ಕನ್ನಡ ಭಾಷೆ, ಆಂಗ್ಲ ಭಾಷೆ ಹಾಗೂ ಗಣಿತ ವಿಷಯಗಳ ಅಭ್ಯಾಸ ಪುಸ್ತಕ ಭಾಗ–1 ಮತ್ತು ಭಾಗ–2 ನ್ನು ಪರಿಶೀಲಿಸಿ, ಪರಿಷ್ಕರಿಸಿ ಹಾಗೂ ಹೊಸ ಪಠ್ಯ ಪುಸ್ತಕಗಳಿಗನುಗುಣವಾಗಿ ರಚಿಸಿ, ವಿದ್ಯಾವಿಕಾಸ ಯೋಜನೆಯಡಿ 2026–27ನೇ ಸಾಲಿಗೆ ಅನ್ವಯವಾಗುವಂತೆ ಸಿದ್ಧಪಡಿಸಿದೆ. ಮಕ್ಕಳ ಸಾಮರ್ಥ್ಯಾಧಾರಿತ ಕಲಿಕೆಗೆ ಅಗತ್ಯವಿರುವ ಕಲಿಕಾ ಫಲಗಳನ್ನು ಸಾಧಿಸಲು ಮತ್ತು ಕಲಿಕೆಯನ್ನು ದೃಢಗೊಳಿಸಲು ಅನುಕೂಲವಾಗುವಂತೆ ಹಾಗೂ ವಿದ್ಯಾರ್ಥಿಗಳ ವೈಯಕ್ತಿಕ ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು 'ಅಭ್ಯಾಸ ಪುಸ್ತಕ' ಗಳನ್ನು ರೂಪಿಸಲಾಗಿದೆ.

ಕಲಿಕಾಫಲ ಆಧಾರಿತ ಕಲಿಕೆಯನ್ನು ದೃಢೀಕರಿಸಿಕೊಳ್ಳಲು ಪಠ್ಯಪುಸ್ತಕಕ್ಕೆ ಪೂರಕವಾಗಿ ಹೆಚ್ಚಿನ ಅಭ್ಯಾಸಗಳನ್ನು ಒಳಗೊಂಡಿರುವ ಈ ಅಭ್ಯಾಸ ಪುಸ್ತಕಗಳನ್ನು ಸಂಪನ್ಮೂಲ ಶಿಕ್ಷಕರಿಂದ ರಚಿಸಿ, ಪರಿಶೀಲಿಸಿ, ಪರಿಷ್ಕರಣೆ ಮಾಡಿದ್ದು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ಇದನ್ನು ಸಮರ್ಥವಾಗಿ ಬಳಸಿಕೊಳ್ಳುವುದು. ಮಕ್ಕಳ ಕಲಿಕಾ ಸಾಧನೆಯ ಮಟ್ಟವನ್ನು ಹೆಚ್ಚಿಸಲು ಎಲ್ಲರೂ ನಿರಂತರವಾಗಿ ಪ್ರಯತ್ನಿಸೋಣವೆಂದು ಆಶಿಸುತ್ತೇನೆ.

ಅಭ್ಯಾಸ ಪುಸ್ತಕಗಳ ರಚನೆ, ಪರಿಶೀಲನೆ ಮತ್ತು ಪರಿಷ್ಕರಣೆಯಲ್ಲಿ ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನೆಗಳು.

**ಶ್ರೀ. ವಿಕಾಸ್ ಕಿಶೋರ್ ಸುರಳ್ಕರ್., ಭಾ.ಆ.ಸೇ.,**
ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು.

NOT TO BE REPUBLISHED @KTBS

# ಶುಭ ಹಾರೈಕೆ

“ಶಿಕ್ಷಣಕ್ಕೆ ದತ್ತ ಅವಕಾಶ ನೀಡಿ, ಅದನ್ನು ನೆರವೇರಿಸುವ ಕರ್ತವ್ಯ ನಮ್ಮದು”

–ಮಹಾತ್ಮಾ ಗಾಂಧೀಜಿ

ಮಹಾತ್ಮಾ ಗಾಂಧೀಜಿಯವರ ಆಶಯದಂತೆ ಮೇಲಿನ ಹೇಳಿಕೆಯು ಇಂದಿಗೂ ಪ್ರಸ್ತುತವಾಗಿದ್ದು, ಪ್ರಸಕ್ತ ಶತಮಾನದ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿ. ಅಗತ್ಯವಿರುವ ಜ್ಞಾನ, ಜೀವನ ಕೌಶಲಗಳನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯು ವಿಕಸನಗೊಳ್ಳುತ್ತಿದೆ. ಬೋಧನೆ ಮತ್ತು ಕಲಿಕೆಯ ಪರಿಕಲ್ಪನೆಯು ವ್ಯಾಪಕವಾದ ಬದಲಾವಣೆಗಳಿಗೆ ಒಳಗಾಗಿದೆ. ಇದರನ್ವಯ ಇಲಾಖೆಯು ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ, ಗುಣಮಟ್ಟದ ಶಿಕ್ಷಣವನ್ನು ನೀಡಲು ನಿರಂತರವಾಗಿ ಕ್ರಮ ವಹಿಸುತ್ತಿದೆ.

ಮಕ್ಕಳ ಸಾಮರ್ಥ್ಯಾಧಾರಿತ ಕಲಿಕೆಗೆ ಅಗತ್ಯವಿರುವ ಕಲಿಕಾಫಲಗಳನ್ನು ಸಾಧಿಸಲು ಮತ್ತು ಕಲಿಕೆಯನ್ನು ದೃಢಗೊಳಿಸಲು ಅನುಕೂಲವಾಗುವಂತೆ ಕನ್ನಡ, ಇಂಗ್ಲಿಷ್ ಮತ್ತು ಗಣಿತ ವಿಷಯಗಳಿಗೆ ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಗಮನದಲ್ಲಿಟ್ಟುಕೊಂಡು ‘ಅಭ್ಯಾಸ ಪುಸ್ತಕ’ ಗಳನ್ನು ರೂಪಿಸಲಾಗಿದೆ.

@KTBS NOT TO BE REPUBLISHED

ಪ್ರತಿ ಪಠ್ಯ ಪುಸ್ತಕಕ್ಕೆ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ರಚಿಸಲಾಗಿದ್ದು, ಭಾಗ – 1 ಮತ್ತು ಭಾಗ – 2 ಅಭ್ಯಾಸ ಪುಸ್ತಕಗಳನ್ನು ಪ್ರತಿ ವಿದ್ಯಾರ್ಥಿಗೆ ನೀಡಲಾಗಿದೆ. ಘಟಕದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು, ಸ್ವಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವಮೌಲ್ಯಮಾಪನ ಸಾಧನವನ್ನು ನೀಡಿದೆ.

ಈ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳು ಎಲ್ಲಾ ಹಂತದ ಮಕ್ಕಳು ಅತ್ಯವಶ್ಯಕವಾದ ಸಾಮರ್ಥ್ಯಗಳನ್ನು ಕರಗತ ಮಾಡಿಕೊಳ್ಳಲು ಸಹಾಯಕವಾಗುತ್ತವೆ. ಮಕ್ಕಳು ಸ್ವತಂತ್ರವಾಗಿ ಹಾಗೂ ಕೆಲವು ಕಡೆ ಅಧ್ಯಾಪಕರ, ಸಹಪಾಠಿಗಳ ಅಥವಾ ಪೋಷಕರ ನೆರವಿನಿಂದ ಈ ಚಟುವಟಿಕೆಗಳನ್ನು ತರಗತಿಗಳಲ್ಲಿ, ತರಗತಿಯ ನಂತರ ಅಥವಾ ಮನೆಯಲ್ಲಿ ಮಾಡಬಹುದಾಗಿದೆ. ಎಲ್ಲಾ ವಿಷಯಗಳಿಗೂ ಆಕರ್ಷಕ ಚಿತ್ರ, ಓದು, ಬರಹದ ಮೂಲಕ ಮಕ್ಕಳು ಅದನ್ನು ಅರ್ಥೈಸಿಕೊಳ್ಳುವಂತೆ ಸರಳವಾಗಿ ರೂಪಿಸಲಾಗಿದೆ. ಸಮೀಕ್ಷೆ ಆಧಾರಿತ ಸಾಧನ ಪರೀಕ್ಷೆಗಳಾದ NAS, CSAS ಮತ್ತು PARAKH Rashtriya Sarvekshan 2024ರ ಸಮೀಕ್ಷಾ ವರದಿಗಳನ್ನು ವಿಶ್ಲೇಷಿಸಿದ್ದು, ಇದರಲ್ಲಿ ಮಕ್ಕಳ ಸಾಧನೆಯನ್ನು ಉತ್ತಮಪಡಿಸಲು ಸೂಕ್ತ ಚಟುವಟಿಕೆಗಳನ್ನು ಸೇರ್ಪಡೆ ಮಾಡಿದೆ.

ಇಲ್ಲಿ ನೀಡಿರುವ ಚಟುವಟಿಕೆಗಳೇ ಅಂತಿಮವಲ್ಲ, ಕಲಿಕೆಗೆ ಸಂಬಂಧಿಸಿದಂತೆ ಇತರೇ ಲಭ್ಯ ಚಟುವಟಿಕೆಗಳನ್ನು ಆಧರಿಸಿ ಕಲಿಯಲು ಮುಕ್ತ ಅವಕಾಶ ನೀಡಬೇಕು. ಮಗು ಮಾಡಿದ ಚಟುವಟಿಕೆಗಳನ್ನು ಗಮನಿಸಿ ಶಿಕ್ಷಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗಿದೆ. ಈ 'ಅಭ್ಯಾಸ ಪುಸ್ತಕ'ಗಳು ಪಠ್ಯಪುಸ್ತಕಗಳಿಗೆ ಪೂರಕ ಸಂಪನ್ಮೂಲವಾಗಿದ್ದು, ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಸಹಾಯಕವಾಗಲಿದೆ. 'ಅಭ್ಯಾಸ ಪುಸ್ತಕ' ಬಳಕೆಗೆ ಪ್ರೇರಕ ಶಕ್ತಿಯಾಗಿರುವ ಶಿಕ್ಷಕ ವೃಂದವು ಉತ್ತಮ ಶಿಕ್ಷಣವನ್ನು ಎಲ್ಲಾ ವಿದ್ಯಾರ್ಥಿಗಳಿಗೆ ತಲುಪಿಸುವ ಗುರುತರ ಜವಾಬ್ದಾರಿಯನ್ನು ಹೊಂದಿರುತ್ತದೆ.

ವಿದ್ಯಾರ್ಥಿಗಳಲ್ಲಿ ಹುದುಗಿರುವ ಜ್ಞಾನ, ಕೌಶಲ್ಯಗಳನ್ನು ಹೊರತರಲು ಈ 'ಅಭ್ಯಾಸ ಪುಸ್ತಕ'ಗಳು ಸದುಪಯೋಗವಾಗಲೆಂದು ಆಶಿಸುತ್ತೇನೆ. ಈ ಪುಸ್ತಕಗಳನ್ನು ಸಿದ್ಧಪಡಿಸಲು ಹಾಗೂ ಪರಿಶೀಲನೆ ಮತ್ತು ಪರಿಷ್ಕರಿಸಲು ಸಹಕರಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಅಭಿನಂದನೆಗಳನ್ನು ಸಲಿಸುತ್ತಾ ಎಲ್ಲರಿಗೂ ಶುಭಹಾರೈಸುತ್ತೇನೆ.

**ಶ್ರೀ ಗೋಪಾಲಕೃಷ್ಣ H N,**
**ನಿರ್ದೇಶಕರು,**
**DSERT, ಬೆಂಗಳೂರು**

@KTBS
NOT TO BE REPUBLISHED

# ಅಭ್ಯಾಸ ಪುಸ್ತಕ 2026–27

## ಮಾರ್ಗದರ್ಶಕರು

| | |
|---|---|
| **ಶ್ರೀ. ವಿಕಾಸ್ ಕಿಶೋರ್ಸುರಳ್ಕರ್.,**<br>ಭಾ.ಆ.ಸೇ.,<br>ಆಯುಕ್ತರು, ಶಾಲಾಶಿಕ್ಷಣಇಲಾಖೆ,<br>ನೃಪತುಂಗರಸ್ತೆ, ಬೆಂಗಳೂರು. | **ಶ್ರೀ ಗೋಪಾಲಕೃಷ್ಣ H N,**<br>ನಿರ್ದೇಶಕರು,<br>DSERT, ಬೆಂಗಳೂರು |

## ಸಹಕಾರ

| | | |
|---|---|---|
| **ಶ್ರೀಮತಿ ಮಂಗಳ ಜಿ**<br>ಉಪ ನಿರ್ದೇಶಕರು,<br>DSERT, ಬೆಂಗಳೂರು | ಯೋಗೇಶ ಕೆ,<br>ಪ್ರಾಂಶುಪಾಲರು<br>ಡಯಟ್, ಮಂಡ್ಯ | ಚಲುವರಾಜು<br>ಉಪನ್ಯಾಸಕರು<br>ಡಯಟ್, ಮಂಡ್ಯ |

## ನಿರ್ವಹಣೆ

| |
|---|
| **ಶ್ರೀಮತಿ ರಾಧಾ ಪಿ.**<br>ಹಿರಿಯ ಸಹಾಯಕ ನಿರ್ದೇಶಕರು<br>ಡಿ.ಎಸ್.ಇ.ಆರ್.ಟಿ, ಬೆಂಗಳೂರು |

## ತಾಂತ್ರಿಕ ಸಹಕಾರ

| |
|---|
| **ಶ್ರೀ ಮೋಹನ್ ಕುಮಾರ್ ಪಿ**<br>ತಾಂತ್ರಿಕ ಸಹಾಯಕರು<br>ಡಿ.ಎಸ್.ಇ.ಆರ್.ಟಿ, ಬೆಂಗಳೂರು |

## ಪರಿಶೀಲನೆ/ ಪರಿಷ್ಕರಣೆ ತಂಡ

| | |
|---|---|
| **ನಾಗಮಣಿ ಡಿ.,**<br>ಸರ್ಕಾರಿ ಹಿರಿಯ ಪ್ರಾಥಮಿಕಶಾಲೆ,<br>ಚಾಪುರದೊಡ್ಡಿ, ಮದ್ದೂರುತಾ | **ಕೆ.ಆರ್.ಸತೀಶ್.,**<br>ಸರ್ಕಾರಿ ಹಿರಿಯ ಪ್ರಾಥಮಿಕಶಾಲೆ,<br>ಬೇಬಿ, ಪಾಂಡವಪುರತಾ |

@KTBS
NOT TO BE REPUBLISHED



## ಕಲಿಕಾ ಫಲಗಳು (Learning Outcomes)

ಈ ತರಗತಿಯಲ್ಲಿ ವಿದ್ಯಾರ್ಥಿಗಳು ಕೆಳಗಿನ ಕಲಿಕಾ ಫಲಗಳನ್ನು ಗಳಿಸಿಕೊಳ್ಳಲು ನಿರೀಕ್ಷಿಸಲಾಗಿದೆ. ಅಭ್ಯಾಸ ಪುಸ್ತಕಗಳ ಸಮರ್ಪಕ ಬಳಕೆಯ ಮೂಲಕ ಮಕ್ಕಳು ಈ ಕಲಿಕಾ ಫಲಗಳನ್ನು ಸಾಧಿಸಲು ಶಿಕ್ಷಕರು ಸಹಕರಿಸುತ್ತಾರೆ. ಶಿಕ್ಷಕರ ಅಭಿಪ್ರಾಯ ಸೂಚಿಸುವ ಭಾಗದಲ್ಲಿ ಮೂರು ಶ್ರೇಣಿಗಳಾದ **'ಅತ್ಯುತ್ತಮ', 'ಉತ್ತಮ'** ಹಾಗೂ **'ಸಾಧಾರಣ'** ಶ್ರೇಣಿಗಳನ್ನು ಪ್ರತಿ ಘಟಕದ/ಪಾಠದ ನಂತರ ನೀಡಿರುವ ಪಟ್ಟಿಯಲ್ಲಿ ಶಿಕ್ಷಕರು ದಾಖಲಿಸುತ್ತಾರೆ. ಇದು ವಿದ್ಯಾರ್ಥಿಗಳು ಕಲಿಕಾ ಫಲಗಳನ್ನು ಗಳಿಸಿಕೊಂಡಿರುವ ಹಂತವನ್ನು ಸೂಚಿಸುತ್ತದೆ.

**ಆರನೆಯ ತರಗತಿ ವಿದ್ಯಾರ್ಥಿಗಳ ಕನ್ನಡ ವಿಷಯದ ಕಲಿಕಾ ಫಲಗಳು :**

- ಕಥೆ, ಕವನ, ಸಂವಾದ ಹಾಗೂ ಚರ್ಚೆಗಳನ್ನು ಆಲಿಸುವರು ಮತ್ತು ಇವುಗಳನ್ನು ಅರ್ಥಮಾಡಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು.
- ಅಪರಿಚಿತ ಸನ್ನಿವೇಶಗಳಲ್ಲಿ ನಡೆಯುವ ಘಟನೆಗಳನ್ನು ವೀಕ್ಷಿಸಿ ಸಂಭಾಷಣೆ, ಸಂವಾದ ಮತ್ತು ಚರ್ಚೆಗಳನ್ನು ಅರ್ಥಮಾಡಿಕೊಂಡು ಸರಿಯಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವರು.
- ವಿಷಯವನ್ನು ಆಲಿಸಿದ ನಂತರ ಏನು? ಏಕೆ? ಹಾಗಾದರೆ? ಹಾಗಾಗದಿದ್ದರೆ? ಎಂಬ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸುವರು.
- ಕೊಟ್ಟಿರುವ ವಿಷಯವನ್ನು ಓದಿ ಅರ್ಥಮಾಡಿಕೊಂಡು ನಿಖರವಾಗಿ ಚರ್ಚಿಸಿ, ತೀರ್ಮಾನಕ್ಕೆ ಬರುವರು.
- ನೋಡಿದ ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿರರ್ಗಳವಾಗಿ ಮಾತನಾಡುವರು.
- ಸ್ವರಭಾರಕ್ಕನುಸಾರವಾಗಿ ಓದುವುದನ್ನು ಅರಿಯುವರು.
- ಮುದ್ರಿತ ವಿಷಯಗಳಾದ ಪದಪುಂಜ, ನುಡಿಗಟ್ಟು ಮತ್ತು ನಾಣ್ಣುಡಿಗಳನ್ನು ಓದಿ, ಅರ್ಥಮಾಡಿಕೊಳ್ಳುವರು ಹಾಗೂ ಸಂಗ್ರಹಿಸುವರು.
- ಪಠ್ಯದಲ್ಲಿ ಬರುವ ಕಥೆ, ಕವನ ಹಾಗೂ ಸಂಭಾಷಣೆಗಳನ್ನು ಸಾರಾಂಶದ ರೂಪದಲ್ಲಿ ಬರೆಯುವುದನ್ನು ಕಲಿಯುವರು.
- ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಪತ್ರ ಹಾಗೂ ಪ್ರವಾಸಗಳನ್ನು ಕುರಿತು ಲೇಖನ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳುವರು.
- ಸರಳ ಕ್ರಿಯಾತ್ಮಕ ಭಾವಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಬರೆಯುವುದನ್ನು ಕಲಿಯುವರು.



©KTBS NOT TO BE REPUBLISHED

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 1. | ಪುನರಾವರ್ತನೆ | 1–2 |
| 2. | ನಾನೇನು ಮರೆತೆ? | 3 |
| 3. | ಅಭ್ಯಾಸ | 4–6 |
| 4. | ಕಿರು ಪರೀಕ್ಷೆ–1 | 7–8 |
| 5. | ಅಭ್ಯಾಸ | 9–12 |
| 6. | ಕಿರು ಪರೀಕ್ಷೆ–2 | 13–15 |
| 7. | ಅಭ್ಯಾಸ | 16–18 |
| 8. | ಅಭ್ಯಾಸ | 19–21 |
| 9. | ಅಭ್ಯಾಸ | 22–26 |
| 10. | ಅಭ್ಯಾಸ | 27–32 |
| 11. | ಅಭ್ಯಾಸ | 33–37 |
| 12. | ಅಭ್ಯಾಸ | 38–42 |
| 13. | ಕಿರು ಪರೀಕ್ಷೆ–3 | 43–45 |
| 14. | ಅಭ್ಯಾಸ | 46–51 |
| 15. | ಅಭ್ಯಾಸ | 52–63 |
| 16. | ಕಿರು ಪರೀಕ್ಷೆ–4 | 64 |


@KTBS NOT TO BE REPUBLISHED

**ವಿದ್ಯಾರ್ಥಿಗಳು ಗಮನಿಸಬೇಕಾದ ಅಂಶಗಳು :**

* ಈ ಅಭ್ಯಾಸ ಪುಸ್ತಕದ ಪ್ರತಿ ಪುಟವನ್ನು ದಿನಕ್ಕೊಂದರಂತೆ ಅಭ್ಯಾಸ ಮಾಡಬೇಕು.
* ಅಭ್ಯಾಸ ಪುಸ್ತಕದಲ್ಲಿ ಒಂದು ಪುಟ ಪೂರ್ಣಗೊಳಿಸಿದ ನಂತರವೇ ಮುಂದಿನ ಪುಟಕ್ಕೆ ಹೋಗಬೇಕು.
* ಚಟುವಟಿಕೆಗಳು ಅರ್ಥವಾಗದಿದ್ದಲ್ಲಿ ಸ್ನೇಹಿತರ/ಶಿಕ್ಷಕರ ಸಹಾಯ ಪಡೆಯುವುದು.
* ಸ್ವಯಂ ಮೌಲ್ಯಮಾಪನ ಪುಟದಲ್ಲಿ ನಿಮಗಿಷ್ಟವಾದ ಚಟುವಟಿಕೆಗಳಿಗೆ '☺' ಸಂಕೇತವನ್ನು, ಭಾಗಶಃ ಇಷ್ಟವಾಗಿದ್ದಲ್ಲಿ '😐' ಸಂಕೇತವನ್ನು ಅಥವಾ ಇಷ್ಟವಾಗದೇ ಇದ್ದಲ್ಲಿ '☹' ಸಂಕೇತವನ್ನು ಗುರುತಿಸಬೇಕು.

❖ ❖ ❖

# 1. ಪುನರಾವರ್ತನೆ

**ಅ. ಅನುಕ್ರಮವಾಗಿ ಬರೆಯಿರಿ.**

| | | | |
|---|---|---|---|
| ಋ | | | |
| ಅಃ | ಐ | | |
| ಏ | ಅ | ಔ | ಇ |
| ಅಂ | ಊ | ಈ | ಎ |
| ಆ | ಒ | ಉ | ಓ |

| | | | | | | |
|---|---|---|---|---|---|---|
| | | | | | | |

| | | | | | |
|---|---|---|---|---|---|
| | | | | | |

| | |
|---|---|
| | |

**ಆ. ದಾರಿ ತೋರಿಸಿ :** 'ಕ' ಅಕ್ಷರದಿಂದ ಪ್ರಾರಂಭಿಸಿ 'ಮ' ವರಗೆ ಸಾಗಿ ಹೊರಗೆ ಬನ್ನಿ.

| | | | | |
|---|---|---|---|---|
| ಕ | ಞ | ಫ | ಜ | ಟ |
| ಮ | ಪ | ಧ | ಡ | ಠ |
| ಭ | ಖ | ಗ | ಚ | ಝ |
| ತ | ದ | ಘ | ಢ | ಛ |
| ಥ | ಬ | ಣ | ಥ | ನ |

→

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |

**ಇ. ಕ್ರಮವಾಗಿ ಬರೆಯಿರಿ.**

| | | | | | | | | |
|---|---|---|---|---|---|---|---|---|
| ವ | ಯ | ಲ | ಶ | ಹ | ಸ | ಳ | ಷ | ರ |

→

| | | | | | | | | |
|---|---|---|---|---|---|---|---|---|
| | | | | | | | | |

**ಈ. ಖಾಲಿ ಇರುವ ಮನೆ ತುಂಬಿಸಿ.**

1.

| | | | | | | |
|---|---|---|---|---|---|---|
| | ಆ | | ಈ | | ಊ | |
| | | ಏ | ಐ | | ಓ | ಔ |

@KTBS NOT TO BE REPUBLISHED

2.

| | | | | | | |
|---|---|---|---|---|---|---|
| ಅ | | ಇ | | ಉ | | |
| ಋ | ಎ | | | ಒ | | |

ಉ. ಅಕ್ಷರಗಳನ್ನು ಆಯ್ದು ಕ್ರಮವಾಗಿ ಬರೆಯಿರಿ.




@KTBS NOT TO BE REPUBLISHED

ಅ ____________________

ಕ ____________________

ಚ ____________________

ಟ ____________________

ತ ____________________

ಪ ____________________

ಯ ____________________

# 2. ನಾನೇನು ಮರೆತೆ?



## ಅನುಸ್ವರ ಅಕ್ಷರಗಳನ್ನು ಇಲ್ಲಿ ಗುರುತಿಸಿದ್ದೇನೆ.

| | | |
|---|---|---|
| ಕ | | ದ |

| | | |
|---|---|---|
| ಅ | | ದ |

| | | |
|---|---|---|
| ಪ | | ಪ |

ಓಹೋ!!
ನಾನು ಮರೆತದ್ದು 'ಸೊನ್ನೆ'
ಬರೆಯುವುದನ್ನು ಅಲ್ಲವೇ ? ಆದರೆ
ಇದನ್ನು ಸೊನ್ನೆ ಎಂಬುದರ ಬದಲಾಗಿ
ಅನುಸ್ವಾರ ಎನ್ನೋಣವೇ ?

| | | |
|---|---|---|
| ಜ | | ಭ |

| | | |
|---|---|---|
| ಗ | | ಧ |

| | | |
|---|---|---|
| ಮ | | ದ |

| | | | |
|---|---|---|---|
| ಪ | | ಚ | ಮ |

| | | | |
|---|---|---|---|
| ಕ | | ದ | ಕ |

| | | | |
|---|---|---|---|
| ಚ | | ಚ | ಲ |

**ನಿಮಗಾಗಿ –** 

★ ಕನ್ನಡ ವರ್ಣಮಾಲೆಯಲ್ಲಿ 49 ಅಕ್ಷರಗಳಿವೆ.

★ ವರ್ಣಮಾಲೆಯನ್ನು ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ :

1.ಸ್ವರಾಕ್ಷರಗಳು(13) 2.ವ್ಯಂಜನಾಕ್ಷರಗಳು(34) 3.ಯೋಗವಾಹಗಳು(2)

★ ಸ್ವರಾಕ್ಷರಗಳು ಎರಡು ರೀತಿಯಲ್ಲಿವೆ.

1. ಹ್ರಸ್ವ ಸ್ವರಗಳು(6) 2. ದೀರ್ಘ ಸ್ವರಗಳು(7)

★ ಯೋಗವಾಹಗಳಲ್ಲಿ ಎರಡು ವಿಧ.

1. ಅನುಸ್ವಾರ (ಂ) 2. ವಿಸರ್ಗ(ಃ)

★ ವ್ಯಂಜನಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿದೆ.

1. ವರ್ಗೀಯ ವ್ಯಂಜನಗಳು(25) 2. ಅವರ್ಗೀಯ ವ್ಯಂಜನಗಳು(9)

★ ವರ್ಗೀಯ ವ್ಯಂಜನಗಳಲ್ಲಿ ಮೂರು ಗುಂಪುಗಳಿವೆ.

1. ಅಲ್ಪ ಪ್ರಾಣಾಕ್ಷರಗಳು (10)
2. ಮಹಾ ಪ್ರಾಣಾಕ್ಷರಗಳು (10)
3. ಅನುನಾಸಿಕ ಅಕ್ಷರಗಳು (5)

©KTBS NOT TO BE REPUBLISHED

# 3. ಅಭ್ಯಾಸ

## ಅ. ಹೇಳುತ್ತಾ ಬರೆಯಿರಿ.

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಉ | ಊ | ಋ | ಎ | ಏ | ಐ | ಒ | ಓ | ಔ | ಅಂ | ಅಃ |
| ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
| | | | | | | | | | | | | | | |
| ಘ | ಘಾ | ಘಿ | ಘೀ | ಘು | ಘೂ | ಘೃ | ಘೆ | ಘೇ | ಘೈ | ಘೊ | ಘೋ | ಘೌ | ಘಂ | ಘಃ |
| | | | | | | | | | | | | | | |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಛ | | | | | | | | | | | | | | |
| ಝ | | | | | | | | | | | | | | |
| ಟ | | | | | | | | | | | | | | |
| ಥ | | | | | | | | | | | | | | |
| ಫ | | | | | | | | | | | | | | |
| ಭ | | | | | | | | | | | | | | |
| ಲ | | | | | | | | | | | | | | |
| ಶ | | | | | | | | | | | | | | |
| ಷ | | | | | | | | | | | | | | |
| ಠ | | | | | | | | | | | | | | |

@KTBS NOT TO BE REPUBLISHED

ಆ. ಚಿತ್ರಗಳನ್ನು ನೋಡಿ ಒಂದೊಂದು ವಾಕ್ಯ ರಚಿಸಿ.

1. 

2. 

3. 

4. 

5. 

@KTBS
NOT TO BE REPUBLISHED

6. 

7. 

8. 

9. 

10. 

@KTBS NOT TO BE REPUBLISHED

# 4. ಕಿರು ಪರೀಕ್ಷೆ–1

**ಅ. ಬಿಟ್ಟು ಹೋಗಿರುವ ಸ್ವರಾಕ್ಷರಗಳನ್ನು ಬರೆಯಿರಿ.**

| | | | | | | | | | | | | |
|---|---|---|---|---|---|---|---|---|---|---|---|---|
| ಅ | | | ಈ | ಉ | | | | | ಐ | | | |

**ಆ. ಅಕ್ಷರಗಳನ್ನು ಅನುಕ್ರಮವಾಗಿ ಬರೆಯಿರಿ.**




**ಇ. ಕೊಟ್ಟ ಅಕ್ಷರಗಳನ್ನು ಬಳಸಿಕೊಂಡು ಪದ ರಚಿಸಿ.**

| | | | | |
|---|---|---|---|---|
| ಆ | ಕ | ಗು | ಜ | ನೇ |

**ಈ. ಈ ಅಕ್ಷರಗಳನ್ನು ಬಳಸಿ, 10 ಪದಗಳನ್ನು ರಚಿಸಿ.**




@KTBS NOT TO BE REPUBLISHED

ಉ. ನಮ್ಮನ್ನು ವಿಂಗಡಣೆ ಮಾಡಿ ಬರೆಯಿರಿ.

ಮಾದರಿ: ಕೋಗಿಲೆ - ಕ್+ಓ,ಗ್+ಇ,ಲ್+ಎ

| | |
|---|---|
| 1. ಪಾಠಶಾಲೆ : | |
| 2. ಗುಡಿಸಲು : | |
| 3. ಪಾರಿವಾಳ : | |
| 4. ಹೊಗಳಿಕೆ : | |
| 5. ಯಜಮಾನ : | |

ಊ. ಕೆಳಕಂಡ ಅಕ್ಷರಗಳಿಗೆ ಪದ ರಚಿಸಿ.

| | | |
|---|---|---|
| ಮ : | ಮಾ : | ಮಿ : |
| ಮೀ : | ಮು: | ಮೂ : |
| ಮೆ : | ಮೇ : | ಮೈ : |
| ಮೊ : | ಮೋ : | ಮೌ : |
| ಮಂ : | ಮಃ: | |

NOT TO BE REPUBLISHED @KTBS

ಋ. 'ಗ' ಅಕ್ಷರಕ್ಕೆ ಮೇಲಿನಂತೆ ಪದ ರಚಿಸಿ.

| | | |
|---|---|---|
| | | |
| | | |
| | | |
| | | |
| | | |

# 5. ಅಭ್ಯಾಸ

## ಅ. ಇದರಂತೆ ಮತ್ತೆ ಬರೆಯಿರಿ.

ಕ್ಕ ಖ್ಖ ಗ್ಗ ಘ್ಘ ಙ್ಙ

ಚ್ಚ ಛ್ಛ ಜ್ಜ ಝ್ಝ ಞ್ಞ

ಟ್ಟ ಠ್ಠ ಡ್ಡ ಢ್ಢ ಣ್ಣ

ತ್ತ ಥ್ಥ ದ್ದ ಧ್ಧ ನ್ನ

ಪ್ಪ ಫ್ಫ ಬ್ಬ ಭ್ಭ ಮ್ಮ

ಯ್ಯ ರ್ರ ಲ್ಲ ವ್ವ ಶ್ಶ

ಷ್ಷ ಸ್ಸ ಹ್ಹ ಳ್ಳ

@KTBS
NOT TO BE REPUBLISHED

## ಆ. ಗಮನಿಸುತ್ತಾ ಬರೆಯಿರಿ.

1. ಅಮ್ಮ = ಅ,ಮ್+ಮ್+ಅ

2. ಅಪ್ಪ = ಅ,ಪ್+ಪ್+ಅ

ಇ. ಕೆಳಗಿನ ಅಂಕಣದಲ್ಲಿರುವ ಅಕ್ಷರಗಳನ್ನು ಬಳಸಿ ಪದಗಳನ್ನು ರಚಿಸಿ.

| | | | | |
|---|---|---|---|---|
| ಚ | ಕ್ಕ | ಚೊ | ಅ | ಮ |
| ರ | ಸ | ಳು | ಗ್ಗ | ರ |
| ಜ | ಹೆ | ಣ | ಮೊ | ಹಿ |
| ಬೆ | ಕ | ಚ್ಚು | ವ | ತ |
| ನು | ಗ | ಡ್ಡ | ದೊ | ಗು |

ಉದಾ:- ದೊಡ್ಡ, ಮಗ

@KTBS
NOT TO BE REPUBLISHED

**ಈ. 'ನಾನೆಲ್ಲಿರುವೆ ?' ಪದಗಳನ್ನು ಹುಡುಕಿ ಬರೆಯಿರಿ. (ಒತ್ತಕ್ಷರ ಇರುವ ಪದಗಳನ್ನು ಮಾತ್ರ)**

**ಮಾದರಿ : ಕಬ್ಬು ಜಗಿದಾಗ ಹುಬ್ಬು ಮೇಲೇರಿತು.**

| ಕಬ್ಬು | ಹುಬ್ಬು |
|---|---|

1. ಅಜ್ಜಿಯ ಅಣ್ಣ ಸುಬ್ಬಣ್ಣ ಊರಿಗೆ ಬಂದರು.

2. ಅಮ್ಮ ತೊವ್ವೆ, ಗೊಜ್ಜು, ಕಜ್ಜಾಯ, ಬಜ್ಜಿ ಮಾಡಿದಳು.

3. ಲಚ್ಚಿಯು ಶಾಲೆಯ ಪಕ್ಕದ ಜಾಗದಲ್ಲಿ ಮಲ್ಲಿಗೆ ಬಳ್ಳಿ ನೆಟ್ಟಳು.

4. ರಸ್ತೆಯ ಎಡಬದಿಯಲ್ಲಿ ನಡೆಯುವುದು ಸೂಕ್ತ.

5. ನಾವೆಲ್ಲರೂ ವಸ್ತು ಪ್ರದರ್ಶನಕ್ಕೆ ಹೋಗೋಣವೇ?

**ಉ. ಚಿತ್ರ ನೋಡಿ ಪದ ರಚಿಸಿ.**







©KTBS NOT TO BE REPUBLISHED

## ಊ. ಸಜಾತಿ ಮತ್ತು ವಿಜಾತಿ ಒತ್ತಕ್ಷರಗಳನ್ನು ಬರೆಯಿರಿ.




| ಸಜಾತಿ | ವಿಜಾತಿ |
|---|---|
| **ಉದಾ:** ಮುಳ್ಳು | ಎಷ್ಟು |
| | |
| | |
| | |
| | |
| | |
| | |

@KTBS NOT TO BE REPUBLISHED

### ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ವರ್ಣಮಾಲೆಯ ಅಕ್ಷರಗಳನ್ನು ಗುರುತಿಸಿ ಬರೆಯುವೆ. | | | |
| 2. | ಚಿತ್ರ ನೋಡಿ ಪದ ರಚಿಸುವೆ. | | | |
| 3. | ವಾಕ್ಯಗಳಲ್ಲಿ ಒತ್ತಕ್ಷರಗಳನ್ನು ಗುರುತಿಸುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

## 6. ಕಿರು ಪರೀಕ್ಷೆ–2

**ಅ. ಬಿಟ್ಟು ಹೋಗಿರುವ ವ್ಯಂಜನಾಕ್ಷರಗಳನ್ನು ಬರೆಯಿರಿ.**

| | | | | |
|---|---|---|---|---|
| ಕ | | ಗ | | |
| | ಛ | ಜ | | |

**ಆ. ಅಕ್ಷರಗಳನ್ನು ಕ್ರಮವಾಗಿ ಬರೆಯಿರಿ.**




**ಇ. ಮನದಲ್ಲೇ ಓದುತ್ತಾ, 'ಏ' ಸ್ವರಾಕ್ಷರದ ಪದಗಳನ್ನು ಗುರುತಿಸಿ ಬರೆಯಿರಿ.**

ಗೋಪಿ ಮುಂಜಾನೆ ಬೇಗ ಏಳುವನು. ಮುಖ ತೊಳೆದು ದೇವರಿಗೆ ಕೈ ಮುಗಿಯುವನು. ಉಪಹಾರ ಸೇವಿಸಿ ಶಾಲೆಗೆ ಹೊರಡುವನು.

**ಈ. ಕೊಟ್ಟ ಅಕ್ಷರಗಳಿಗೆ ಗುಣಿತಾಕ್ಷರಗಳನ್ನು ಬರೆಯಿರಿ.**

ಜ ಜಾ

ಘ

@KTBS NOT TO BE REPUBLISHED

ಉ. ನಾನು ಇಬ್ಬರಿಗೂ ಗೆಳೆಯ. ಮೊದಲು ತುಂಬಿಸಿ, ನಂತರ ಬರೆಯಿರಿ.

**ಮಾದರಿ:**

| | | | |
|---|---|---|---|
| ಕ<br>ಉ [ರ] ಗ<br>ಗ | ಸ<br>ಕೊ [ ] ರೆ<br>ರೆ | ಪಾ<br>ಗಾ [ ] ನ<br>ನ | ಸಿ<br>ಜಿ [ ] ಕೆ<br>ಹ |
| ಅ<br>ಸ [ ] ಳು<br>ಳು | ಸ<br>ಓ [ ] ಗ<br>ಗ | ಹೃ<br>ಉ [ ] ಯ<br>ಯ | ಉ<br>ಕ [ ] ಳಿ<br>ರ |
| ಚಂ<br>ವಂ [ ] ನೆ<br>ನ | ಕ<br>ಚಿ [ ] ತೆ<br>ಡಿ | ಉ<br>ಚ [ ] ರ<br>ರ | ಅ<br>ಆ [ ] ಸ<br>ಸ |
| ಗ<br>ಕ [ ] ದ<br>ಧ | ಸ<br>ಏ [ ] ಸ<br>ಸ | ಅ<br>ಸ [ ] ರೆ<br>ರೆ | ನೆ<br>ಸ [ ] ಳು<br>ಳು |

| **ಮಾದರಿ :** ಉರಗ | ಕರಗ |
|---|---|
| | |
| | |
| | |
| | |
| | |
| | |
| | |

@KTBS
NOT TO BE REPUBLISHED

ಊ. ನಮ್ಮನ್ನು ಬಿಂಗಡಿಸಿ ಬರೆಯಿರಿ.

| | |
|---|---|
| **ಮಾದರಿ :** ಹಾಲು – ಹ್+ಆ,ಲ್+ಉ | |

| | |
|---|---|
| ಕೋಗಿಲೆ – | ಕುದುರೆ– |
| ಗುಡಿಸಲು – | ಸಲಹೆ– |

ಋ. ಕೆಳಗಿನ ಚಿತ್ರದ ಬಗ್ಗೆ ನಿಮಗೆ ಅನಿಸಿದ್ದನ್ನು ಬರೆಯಿರಿ.



© KTBS NOT TO BE REPUBLISHED

# 7. ಅಭ್ಯಾಸ

ಅ. ಚಿತ್ರ ನೋಡಿ ಬರೆಯಿರಿ.

ಮಾದರಿ :



ಅರಸ



ಅರಸರು

















@KTBS
NOT TO BE REPUBLISHED

**ಆ. ಮಾದರಿಯಂತೆ ಸರಿಪಡಿಸಿ ಬರೆಯಿರಿ.**

**ಮಾದರಿ :** **ಗುರು** ಪಾಠವನ್ನು ಮಾಡಿದರು.

**ಗುರುಗಳು** ಪಾಠವನ್ನು ಮಾಡಿದರು.

1. ಗದ್ದೆಯಲ್ಲಿ **ಹೆಂಗಸರು** ಕಳೆ ಕೀಳುತ್ತಿದ್ದಾಳೆ.

2. ಲತಾಳಿಗೆ ಒಬ್ಬನೇ **ಅಣ್ಣಂದಿರು** ಇರುವಂತೆ ಕಾಣುತ್ತದೆ.

3. ಹಳ್ಳಿಯಲ್ಲಿ ತುಂಬಾ **ಮನೆ** ಇದ್ದವು.

4. ಕಾಡಿನಲ್ಲಿ **ಪ್ರಾಣಿ** ಸಭೆ ಸೇರಿದವು.

5. **ಮಗು** ಸಭೆಯಲ್ಲಿ ಕುಳಿತಿದ್ದರು.

@KTBS NOT TO BE REPUBLISHED

**ಇ. ನಮ್ಮನ್ನು ಜೋಡಿಸಿರಿ :** **ಮಾದರಿ :** ಅಕ್ಕ – ಅಕ್ಕಂದಿರು

| | | | | |
|---|---|---|---|---|
| 1. | ಅಕ್ಕ | 1. | ಅರಸರು | |
| 2. | ಮಗು | 2. | ಮರಗಳು | |
| 3. | ನೀನು | 3. | ಶಾಲೆಗಳು | |
| 4. | ಅರಸ | 4. | ಶಿಕ್ಷಕರು | |
| 5. | ನಾನು | 5. | ಅಕ್ಕಂದಿರು | |
| 6. | ಮರ | 6. | ನೀವು | |
| 7. | ಶಾಲೆ | 7. | ಮಕ್ಕಳು | |
| 8. | ಶಿಕ್ಷಕ | 8. | ನಾವು | |

**ಈ. ಅಡಿ ಗೆರೆ ಎಳೆದ ಪದಗಳನ್ನು ಮಾತ್ರ ಬರೆಯಿರಿ.**

| | |
|---|---|
| 1. ನಾನು ನಾಟಕವನ್ನು ನೋಡಲು ಹೋಗಿದ್ದೆನು. | ಹೋಗಿದ್ದೆನು. |
| 2. ಅಪ್ಪ ಅಡುಗೆ ಮಾಡಿದ್ದರು. | |
| 3. ಹುಡುಗರು ಮೈದಾನದಲ್ಲಿ ಆಡಿದ್ದರು. | |
| 4. ರಶ್ಮಿಯು ನೃತ್ಯ ಮಾಡಿದಳು. | |
| 5. ಮೂರ್ತಿಯು ಶಾಲೆಗೆ ಹೋದನು. | |
| 6. ನಾನು ನಾಟಕ ನೋಡಲು ಹೋಗುತ್ತಿದ್ದೇನೆ. | |
| 7. ಅಪ್ಪ ಅಡುಗೆ ಮಾಡುತ್ತಿದ್ದಾರೆ. | |
| 8. ಹುಡುಗರು ಮೈದಾನದಲ್ಲಿ ಆಡುತ್ತಿದ್ದಾರೆ. | |
| 9. ರಶ್ಮಿಯು ನೃತ್ಯ ಮಾಡುತ್ತಿದ್ದಾಳೆ. | |
| 10. ಮೂರ್ತಿಯು ಶಾಲೆಗೆ ಹೋಗುತ್ತಿದ್ದಾನೆ. | |
| 11. ನಾನು ನಾಟಕ ನೋಡಲು ಹೋಗುವೆನು. | |
| 12. ಅಪ್ಪ ಅಡುಗೆ ಮಾಡುವರು. | |
| 13. ಹುಡುಗರು ಮೈದಾನದಲ್ಲಿ ಆಡುವರು. | |
| 14. ರಶ್ಮಿಯು ನೃತ್ಯ ಮಾಡುವಳು. | |
| 15. ಮೂರ್ತಿಯು ಶಾಲೆಗೆ ಹೋಗುವನು. | |

@KTBS NOT TO BE REPUBLISHED

**ಬರೆದ ಪದಗಳು ಏನೆಂಬುದನ್ನು ಕೇಳಿ ತಿಳಿದುಕೊಳ್ಳಿ.**

# 8. ಅಭ್ಯಾಸ

ಅ. ನಮ್ಮನ್ನು ನಮ್ಮ ಗುಂಪಿಗೆ ಸೇರಿಸಿ ಬರೆಯಿರಿ.




ಮಾದರಿ :

| | | |
|---|---|---|
| ರಾಜ | ರಾಣಿ | ಕಲ್ಲು |
| | | |
| | | |
| | | |
| | | |
| | | |
| | | |
| | | |
| | | |

@KTBS
NOT TO BE REPUBLISHED

## ಆ. ಗೆರೆ ಎಳೆದ ಪದಗಳನ್ನು ಆಯಾಯ ವೃತ್ತದಲ್ಲಿ ಬರೆಯಿರಿ.

ಶಿಕ್ಷಕರೇ, ಈ ಚಟವಟಿಕೆಯನ್ನು ಮಕ್ಕಳಿಗೆ ಅರ್ಥೈಸಿ

a. ಹೂವನ್ನು ಮಾರುತ್ತಾ ಹೂವಾಡಗಿತ್ತಿ ಹಾಡುತ್ತಾ ಬರುತಿಹಳು.
b. ಕುಂಟರು, ಕುರುಡರಿಗೆ ಸಹಾಯ ಮಾಡಿ.
c. ವಿದ್ವಾಂಸರು ಎಲ್ಲವನ್ನೂ ಬಲ್ಲವರಾಗಿರುತ್ತಾರೆ.
d. ರವಿಯು ಬಾಲ್ಯದಿಂದಲೇ ರೋಗಿಯಾಗಿದ್ದನು.

a. ನದಿಯು ಹರಿಯುತ್ತದೆ.
b. ಆ ಪರ್ವತ ಬಹಳ ದೊಡ್ಡದು.
c. ಅವಳು ಊರಿಗೆ ಹೋದಳು.
d. ಹುಡುಗಿಯು ಹಣ್ಣನ್ನು ತಿಂದಳು.
e. ನಮ್ಮ ಊರು ನೋಡಲು ಸುಂದರವಾಗಿದೆ.

a. ವರುಣನಿಗೆ ಬಹಳ ಬಾಯಾರಿಕೆಯಾಗಿತ್ತು.
b. ಹಿಮಾಲಯ ಪರ್ವತವು ಉತ್ತರ ದಿಕ್ಕಿನಲ್ಲಿದೆ.
c. ಕಾವೇರಿ ನದಿಯು ಕೊಡಗಿನಲ್ಲಿ ಹುಟ್ಟುತ್ತದೆ.
d. ಚೈತ್ರಳು ಕಥೆಯನ್ನು ಕೇಳಿದಳು.
e. ನಮ್ಮ ದೇಶದ ಹೆಸರು ಭಾರತ.

a. ಕೆಂಪು ಗುಲಾಬಿಯು ನೋಡಲು ಸುಂದರ.
b. ಕಾಡಿನಲ್ಲಿ ದೊಡ್ಡ ಆನೆ ವಾಸಿಸುತ್ತದೆ.
c. ರಮ್ಯ ಜಾಣ ಹುಡುಗಿ.
d. ವೇಣು ನೀಲಿ ಅಂಗಿಯನ್ನು ತೊಟ್ಟಿದ್ದಾನೆ.
e. ರಶ್ಮಿಯು ಮನೆಯ ಹಿರಿಯ ಸೊಸೆ.

NOT TO BE REPUBLISHED @KTBS

a. ವಿಶ್ವಾಸನು ದಿನಕ್ಕೆ ನೂರು ರೂಪಾಯಿ ಗಳಿಸುತ್ತಾನೆ.

b. ಒಂದು ವರ್ಷಕ್ಕೆ ಹನ್ನೆರಡು ತಿಂಗಳು.

c. ಗಾನಳ ಬಳಿ ಇಪ್ಪತ್ತೈದು ಚಾಕಲೇಟುಗಳಿವೆ.

d. ಒಂದು ತಿಂಗಳಿಗೆ ಮೂವತ್ತು ದಿನಗಳು.

e. ದಿಕ್ಕುಗಳು ಒಟ್ಟು ಎಂಟು.

f. ಧಮನಿಯು ಬೆಳಿಗ್ಗೆ ಐದು ಗಂಟೆಗೆ ಏಳುತ್ತಾಳೆ.

a. ಭಾರತದ **ಉತ್ತರ ದಿಕ್ಕಿನಲ್ಲಿ** ಹಿಮಾಲಯ ಪರ್ವತವಿದೆ.

b. ಕರ್ನಾಟಕವು ಭಾರತದ **ದಕ್ಷಿಣ** ದಿಕ್ಕಿನಲ್ಲಿದೆ.

c. ಮನೆಯ **ಕೆಳಗಿನ** ಭಾಗದಲ್ಲಿ ತೆಂಗಿನ ತೋಟವಿದೆ.

d. ಶಾಲೆಯ **ಆಚೆ ಈಚೆ** ಗಿಡಮರಗಳಿವೆ.

e. ಮೂಡಣ ಎಂಬುದು **ಪೂರ್ವ** ದಿಕ್ಕನ್ನು ಸೂಚಿಸುತ್ತದೆ.

**ಗುರುತಿಸಿದ ಪದಗಳು ಏನನ್ನು ಹೇಳುತ್ತವೆ? ಗೆಳೆಯರಲ್ಲಿ/ಶಿಕ್ಷಕರಲ್ಲಿ ಕೇಳಿ ತಿಳಿಯಿರಿ.**

**ಇ. ನಿಮ್ಮ ಮನೆಯಲ್ಲಿ ಬಳಸುವ ವಸ್ತುಗಳನ್ನು ಪಟ್ಟಿ ಮಾಡಿ.**

@KTBS NOT TO BE REPUBLISHED

# 9. ಅಭ್ಯಾಸ

## ಅ. ಪದಗಳನ್ನು ಬಿಡಿಸಿ ಬರೆಯಿರಿ.

**ಮಾದರಿ :** ಕಾಡಿನಲ್ಲಿ = ಕಾಡಿನ + ಅಲ್ಲಿ

| | | | |
|---|---|---|---|
| ಕೈಯಲ್ಲಿ = | | ಗಾಬರಿಯಿಂದ = | |
| ಕೊಳ್ಳಿಯನ್ನು = | | ಮಳೆಯಲ್ಲಿ = | |
| ಮಾತಿಲ್ಲ = | | ಕೋಗಿಲೆಯು = | |
| ಪಾಲಾಗು = | | ಗುರುವಿನ = | |

## ಆ. ನಮ್ಮನ್ನು ಕೂಡಿಸಿ ಬರೆಯಿರಿ.

**ಮಾದರಿ :** ನಮ್ಮ + ಅನ್ನು = ನಮ್ಮನ್ನು

| | | | |
|---|---|---|---|
| ಮಲಗಿ + ಇದೆ = | | ಒಬ್ಬ + ಅನ್ನು = | |
| ದಂಡೆ + ಅಲ್ಲಿ = | | ಮರ + ಇಂದ = | |
| ಇಡು + ಉತ್ತ = | | ಮರ + ಉ = | |
| ಎಚ್ಚರ + ಆಗಿ = | | ಮರ + ಅಕ್ಕೆ = | |

## ಇ. ಹೀಗೇ ಬರೆಯಿರಿ.

1. ಗೌರಿ + ಉ = ಗೌರಿಯು
2. ಗೌರಿ + ಅನ್ನು = ಗೌರಿಯನ್ನು
3. ಗೌರಿ + ಇಂದ = ಗೌರಿಯಿಂದ

©KTBS NOT TO BE REPUBLISHED

4. ಗೌರಿ + ಗೆ = ಗೌರಿಗೆ

5. ಗೌರಿ + ದೆಸೆಯಿಂದ = ಗೌರಿಯ ದೆಸೆಯಿಂದ

6. ಗೌರಿ + ಅ = ಗೌರಿಯ

7. ಗೌರಿ + ಅಲ್ಲಿ = ಗೌರಿಯಲ್ಲಿ

## ಈ. ಮತ್ತೆ ಬರೆಯಿರಿ.

1. ಗೀತಾಳು ಮನೆಗೆ ಬಂದಳು.

2. ಗೀತಾಳನ್ನು ಶಾಲೆಗೆ ಕಳುಹಿಸಿದರು.

3. ಗೀತಾಳಿಂದ ಅಮ್ಮನಿಗೆ ಸಹಾಯವಾಯಿತು.

4. ಗೀತಾಳಿಗೆ ತುಂಬಾ ಸಂತೋಷವಾಯಿತು.

5. ಗೀತಾಳ ದೆಸೆಯಿಂದ ರವಿಯು ಶಾಲೆಗೆ ಹೋಗುವಂತಾದನು.

6. ಗೀತಾಳ ಕಲಿಕೆ ಉತ್ತಮವಾಗಿತ್ತು.

7. ಗೀತಾಳಲ್ಲಿ ಒಳ್ಳೆಯ ಗುಣಗಳಿದ್ದವು.

8. ಗೀತಾಳೇ ಎಲ್ಲಾ ಗೆಲುವಿಗೆ ಕಾರಣಳು.

@KTBS NOT TO BE REPUBLISHED

**ಉ. ಮಾದರಿಯಂತೆ ವಾಕ್ಯಗಳನ್ನು ರಚಿಸಿ.**

| | |
|---|---|
| **ಮಾದರಿ :** ಅನ್ನು | – ವರುಣನು ಮರವನ್ನು ಏರಿದನು. |
| 1. ಉ | – |
| 2. ಇಂದ | – |
| 3. ಕ್ಕೆ | – |
| 4. ಅಲ್ಲಿ | – |
| 5. ಅ | – |
| 6. ದೆಸೆಯಿಂದ | – |

**ಈ ವಾಕ್ಯಗಳಿಂದ ನೀವೇನು ಕಲಿತಿರಿ? ಗೆಳೆಯರೊಂದಿಗೆ ಹಂಚಿಕೊಳ್ಳಿ.**

**ಊ. ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಾಗಿ ವರ್ಗೀಕರಿಸಿ.**

(ಕೃಷ್ಣ, ಹಾಲು, ಪೂತನಿ, ಬುಗುರಿ, ಪೋರ, ಬೆಂಕಿ, ಒಡೆಯ, ಕೀಲು, ಆನೆ, ಅಕ್ರೂರ, ದೇವಕಿ, ವಸುದೇವ, ಕಂಸ, ಕುಂಬಳ, ರೋಹಿಣಿ, ಯಶೋಧೆ, ಮಗ)

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| | | |
| | | |
| | | |
| | | |
| | | |
| | | |

NOT TO BE REPUBLISHED ©KTBS

# ಆನೆಯ ದಂತ

**ಋ. ಚಿತ್ರ ನೋಡಿ ಪದ ಗುರುತಿಸಿ. ಪದದ ಜೊತೆಗೆ ಪ್ರತ್ಯಯವನ್ನು ಗುರುತಿಸಿ.**

ಒಂದು ಊರಿನಲ್ಲಿ ಒಂದು  ಇತ್ತು. ಈ  ಗೆ ಒಂದು ಗುಬ್ಬಚ್ಚಿ, ಒಂದು ಎಮ್ಮೆ, ಒಬ್ಬ ಹುಡುಗ ತಿಮ್ಮ ಹೀಗೆ ಮೂವರು ಗೆಳೆಯರಿದ್ದರು. ಆ  ಯನ್ನು ಕಂಡರೆ ಈ ಮೂವರು ಗೆಳೆಯರಿಗೂ ಒಲವು. ಅಬ್ಬಬ್ಬಾ ! ಯ ಎತ್ತರ, ಅದರ ದೊಡ್ಡ ದೇಹ, ಅಗಲವಾದ ಕಿವಿ, ಸಣ್ಣ ಕಣ್ಣು ತೂಗಾಡುವ ಸೊಂಡಿಲು, ಬೆಳ್ಳಗೆ ಹೊಳೆಯುವ ದಂತ – ಎಲ್ಲವೂ ಅವರಿಗೆ ಅಚ್ಚು ಮೆಚ್ಚು .

ಒಂದು ದಿನ ಆ ಊರಿಗೆ ಕತ್ತಲಲ್ಲಿ ಇಬ್ಬರು ಕಳ್ಳರು ಬಂದರು.  ಯನ್ನು ಮರಕ್ಕೆ ಹಗ್ಗದಿಂದ ಕಟ್ಟಿ ಹಾಕಿದರು. ಯ ದಂತವನ್ನು ಕೊಯ್ಯಲು ಹವಣಿಸಿದರು. ಅದೇ ಮರದ ಮೇಲೆ ಯ ಗೆಳೆಯ ಗುಬ್ಬಚ್ಚಿ ಕುಳಿತಿತ್ತು.  ಗೆ ಆದ ಪಾಡು ನೋಡಿ ಪುರ್ರನೆ ಹಾರಿ ಬಂದು ಎಮ್ಮೆಗೆ ಹೇಳಿತು. ಕೂಡಲೇ ಎಮ್ಮೆ ತಿಮ್ಮನಿಗೆ ತಿಳಿಸಿತು.

©KTBS
NOT TO BE REPUBLISHED



ಆಗ ಗಾಗಿ ತಿಮ್ಮ ಓಡೋಡಿ ಬಂದ. ಅವನ ಅಜ್ಜ , ಅಪ್ಪ , ಅವ್ವ ಎಲ್ಲರೂ ಹಿಂದೆಯೇ ಓಡಿ ಬಂದರು. 'ಅಯ್ಯಯ್ಯೋ ಊರ ಜನರೇ ಎದ್ದೇಳಿ, ಯ ದಂತ ಉಳಿಸಿ' ಎಂದು ಬೊಬ್ಬೆ ಹಾಕಿದರು. ಜನರೆಲ್ಲ ಬಂದರು. ಕಳ್ಳರನ್ನು ಹಿಡಿದರು. ಯನ್ನು ಬಿಡಿಸಿದರು. ಯ ದಂತವನ್ನು ಉಳಿಸಿದರು.

ಗೆಳೆಯರ ಸಹಾಯಕ್ಕೆ ಯು ಸೊಂಡಿಲೆತ್ತಿ ಸಲಾಮು ಮಾಡಿತು. ಎಲ್ಲರೂ ಸಂತೋಷದಿಂದ ಹಹ್ಹಹ್ಹಾ ....... ಎಂದು ಚಪ್ಪಾಳೆ ತಟ್ಟಿ ಕುಣಿದರು.

**ಶಿಕ್ಷಕರಿಗೆ ಸೂಚನೆ :**

1. ಆನೆಯ ಚಿತ್ರವನ್ನು ಪ್ರತಿಬಾರಿ ಆನೆ ಎಂದು ಓದಿಸಿ. ಪ್ರತ್ಯಯಗಳನ್ನು ಪರಿಚಯಿಸಿ.

[ಆನೆ] [ಆನೆ] ಯ [ಆನೆ] ಗೆ [ಆನೆ] ಗಾಗಿ [ಆನೆ] ಯನ್ನು [ಆನೆ] ಯು

2. ಈ ಕಥೆಯಲ್ಲಿ ಬರುವ ಸಜಾತಿ ಒತ್ತಕ್ಷರ ಪದಗಳನ್ನು ಓದಿಸಿ, ಒಮ್ಮೆ ಬರೆಸಿ.

**ಈ ಕಲಿಕೆಯಿಂದ ನೀವು ಏನು ಕಲಿತಿರಿ ? ಶಿಕ್ಷಕರೊಂದಿಗೆ ಹಂಚಿಕೊಳ್ಳಿ.**

@KTBS NOT TO BE REPUBLISHED

# 10. ಅಭ್ಯಾಸ

## ಅ. ಕಣ್ಣುಗುಡುಕು (ವ್ಯತ್ಯಾಸ ಗುರುತಿಸಿ)





@KTBS NOT TO BE REPUBLISHED

**ನಮ್ಮ ಆಶಯ :** ಮೇಲಿನ ಎರಡೂ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಇದ್ದರೂ ಅವುಗಳಲ್ಲಿ ಹತ್ತು ವ್ಯತ್ಯಾಸಗಳಿವೆ. ಅವುಗಳನ್ನು ಗುರುತಿಸಿ. ಚಿತ್ರದ ಬಗ್ಗೆ ಬರೆಯಿರಿ.

@KTBS
NOT TO BE REPUBLISHED

ಆ. ತತ್ಸಮ – ತದ್ಭವ ಪದಗಳನ್ನು ಬರೆಯಿರಿ.

ಮಾದರಿ : ಆರ್ಯ – ಅಜ್ಜ

| | |
|---|---|
| ಕಾರ್ಯ – | ಪದ್ಮ – |
| ಚಂದ್ರ – | ಭಕ್ತಿ – |
| ವಿಜ್ಞಾನ – | ವೀಧಿ – |
| ನಿತ್ಯ – | ಸಜ್ಜೆ – |
| ಹೊತ್ತಿಗೆ – | ತ್ಯಾಗ – |
| ಚಾಗ – | ಸೂರ್ಯ – |
| ಸಿರಿ – | ಸರಸ್ವತಿ – |

## ಇ. ಸಂತೆಯ ದೃಶ್ಯ



ಮೇಲಿನ ದೃಶ್ಯಗಳನ್ನು ಗಮನಿಸಿ. ನಿಮ್ಮದೇ ಶೈಲಿಯಲ್ಲಿ ಚಿತ್ರದ ಬಗ್ಗೆ ವಿವರಿಸಿ.

@KTBS NOT TO BE REPUBLISHED

## ಈ. ಚಿತ್ರಗಳನ್ನು ಗಮನಿಸಿ ಒಂದೆರಡು ವಾಕ್ಯಗಳನ್ನು ಬರೆಯಿರಿ.

1.



2.



3.



4.



@KTBS
NOT TO BE REPUBLISHED

5.



6.



7.



8.



@KTBS NOT TO BE REPUBLISHED

## ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಚಿತ್ರಗಳನ್ನು ನೋಡಿ ಘಟನೆಗಳನ್ನು ವಿವರಿಸುವೆ. | | | |
| 2. | ಸರಿಯಾದ ವಾಕ್ಯಗಳನ್ನು ರಚಿಸುವೆ. | | | |
| 3. | ಕಥೆಯನ್ನು ಸರಿಯಾದ ಕ್ರಮದಲ್ಲಿ ಓದುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |
|---|---|---|---|---|---|---|

@KTBS
NOT TO BE REPUBLISHED

# 11. ಅಭ್ಯಾಸ

## ಅ. ನಿಮಗೆಷ್ಟು ತಿಳಿದಿದೆ? ಬರೆಯಿರಿ.

ಅರಸಾಗಿ ಉಣ್ಣು; ಬಾಯಿ ಮೊಸರು; ಭಾಗ್ಯ; ಗತಿಗೇಡು; ಆನೆ ಕೊಟ್ಟರೂ ಬಾರದು; ತಾಯಿಗಿಂತ ಬಂಧುವಿಲ್ಲ; ತೂರಿಕೋ; ಮರವಾಗಿ ಬಗ್ಗೀತೇ; ಕೈಲಾಸ; ತುಳುಕುವುದಿಲ್ಲ; ಮೊಳಕೆಯಲ್ಲಿ; ಪ್ರಾಣ ಸಂಕಟ; ಮಹರಾಯ; ಚಿಂತಿಸಿ ಫಲವೇನು? ಕಾಲುಚಾಚು; ಒಲೆಕೆಡಿಸಿತು; ಮದ್ದಲ್ಲ; ಜಗಳವಿಲ್ಲ; ನಿಮಿಷ; ದೊಡ್ಡಪ್ಪ; ಬಲವಿದೆ.

**ಮಾದರಿ :** ಆಳಾಗಿ ದುಡಿ ಅರಸನಾಗಿ ಉಣ್ಣು.

| | |
|---|---|
| 1. ಬೆಕ್ಕಿಗೆ ಆಟ ಇಲಿಗೆ | |
| 2. ಬೆಳೆವ ಸಿರಿ | |
| 3. ಉಪ್ಪಿಗಿಂತ ರುಚಿ ಇಲ್ಲ | |
| 4. ಹಾಸಿಗೆ ಇದ್ದಷ್ಟು | |
| 5. ಹಿತ್ತಲ ಗಿಡ | |
| 6. ಒಗ್ಗಟ್ಟಿನಲ್ಲಿ | |
| 7. ಮಿಂಚಿಹೋದ ಕಾರ್ಯಕ್ಕೆ | |
| 8. ಮಾಡಿದ್ದುಣ್ಣೋ | |
| 9. ಗಾಳಿ ಬಂದಂತೆ | |
| 10. ಗಿಡವಾಗಿ ಬಗ್ಗದ್ದು | |
| 11. ಕೈ ಕೆಸರಾದರೆ | |
| 12. ಆರೋಗ್ಯವೇ | |
| 13. ಅತಿ ಆಸೆ | |
| 14. ಅಡಿಕೆಗೆ ಹೋದ ಮಾನ | |

@KTBS NOT TO BE REPUBLISHED

ಆ. ನಿಮಗೆ ತಿಳಿದಿರುವ ಇನ್ನಷ್ಟು ಗಾದೆಗಳನ್ನು ಸಂಗ್ರಹಿಸಿ ಬರೆಯಿರಿ.

1.

2.

3.

4.

5.

6.

7.

8.

©KTBS NOT TO BE REPUBLISHED

ಇ. ವಿಭಕ್ತಿ ಪ್ರತ್ಯಯಗಳನ್ನು ತಿಳಿದು ಕೆಳಗಿನ ಪದಗಳಲ್ಲಿರುವ ಪ್ರತ್ಯಯವನ್ನು ಗುರುತಿಸಿ.

ಸ್ವತಂತ್ರವಾದ ಅರ್ಥವಿಲ್ಲದೆ ನಾಮಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ 'ಉ', 'ಅನ್ನು', 'ಇಂದ,' 'ಗೆ'' ಕ್ಕೆ' 'ದೆಸೆಯಿಂದ' 'ಅ', 'ಅಲ್ಲಿ'– ಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು.

| ನಾಮಪದ | ವಿಭಕ್ತಿ |
|---|---|
| ರಮೇಶನು | |
| ಮನೆಯಲ್ಲಿ | |
| ಹಣ್ಣನ್ನು | |
| ಜೇಬಿನಿಂದ | |
| ಮನೆಯ | |
| ರಾಣಿಗೆ | |
| ರಾಜನಿಂದ | |

| ನಾಮಪದ | ವಿಭಕ್ತಿ |
|---|---|
| ಸೀತೆಯು | |
| ಅಶೋಕನಿಂದ | |
| ನಿನ್ನ ದೆಸೆಯಿಂದ | |
| ರಾವಣನಿಗೆ | |
| ಬೆಂಗಳೂರಿನಲ್ಲಿ | |
| ರಾಮನನ್ನು | |
| ಅರುಣಳ | |

## ಈ. ನಾನ್ಯಾರೆಂದು ಹೇಳಿರಿ :

| |
|---|
| ಕಪ್ಪೆ , ನೆರಳು, ಮೊಟ್ಟೆ , ಮೂಗುತಿ, ಹುಬ್ಬು , ನೀರು, ಪುಸ್ತಕ, ಬುಗುರಿ, ಅಂಗೈ, ನಿಂಬೆಹಣ್ಣು |

1. ಕೂಗಿದರೆ ರಾವಣ, ಹಾರಿದರೆ ಹನುಮಂತ, ಕೂತರೆ ಮುನಿ =
2. ಚಿಕ್ಕ ಮನೆಗೆ ಚಿನ್ನದ ಬೀಗ =
3. ಏರಿ ಮೇಲೆ ಸಾಲು ಮರ =
4. ಐದು ಮನೆಗೆ ಒಂದೇ ಅಂಗಳ.=
5. ಮುಚ್ಚಿದರೆ ಒಂದು ಬಿಚ್ಚಿದರೆ ಸಾವಿರ =
6. ಬರ್‍ತಾ ಇಳಿತಾನೆ, ಹೋಗ್ತಾ ಏರ್‍ತಾನೆ =
7. ಸುತ್ತಮುತ್ತ ಸುಣ್ಣದ ಗೋಡೆ; ಎತ್ತ ನೋಡಿದರೂ ಬಾಗಿಲಿಲ್ಲ =
8. ಗಿರಿಗಿರ ತಿರುಗುತ್ತೆ; ಸುಸ್ತಾಗಿ ಬೀಳುತ್ತೆ=
9. ಚಳಿಯಲ್ಲಿ ಕಲ್ಲಾಗಿ ನಿಂತೇನು; ಬಿಸಿಲಲ್ಲಿ ಕಲ್ಕರಗಿ ಹರಿದೇನು =
10. ಮುಳ್ಳು ಗಿಡದಲ್ಲಿ ಬಂಗಾರದ ಮೊಟ್ಟೆ =

## ಉ. ನಿಮಗೆ ತಿಳಿದಿರುವ ಒಗಟುಗಳನ್ನು ಬರೆಯಿರಿ.

1.
2.
3.
4.
5.
6.

NOT TO BE REPUBLISHED ©KTBS

**ಊ. ನನ್ನನ್ನು ಓದಿ ಗೆರೆ ಎಳೆದ ಪದಗಳ ಅರ್ಥವನ್ನು ತಿಳಿಯಿರಿ.**

ರಶ್ಮಿ ಮತ್ತು ಚೈತ್ರ ಇಬ್ಬರೂ ಅಕ್ಕ ತಂಗಿಯರು. ಇಬ್ಬರಿಗೂ ಅಜಗಜಾಂತರ ವ್ಯತ್ಯಾಸವಿತ್ತು. ರಶ್ಮಿ ಮೌನವಾಗಿಯೇ ಇರುತ್ತಿದ್ದಳು. ಆದರೆ ಚೈತ್ರ ಮಾತಿನ ಮಲ್ಲಿ. ಸದಾ ಯಾವುದಾದರೊಂದು ವಿಷಯದ ಬಗ್ಗೆ ಮಾತನಾಡುತ್ತಲೇ ಇರುತ್ತಿದ್ದಳು. ಅಲ್ಲದೆ ಇಬ್ಬರನ್ನೂ ಮನೆಯವರು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಆದರೂ ಚೈತ್ರ ತನ್ನ ಕೆಲಸದ ಜೊತೆಗೆ ಪುಸ್ತಕದ ಹುಳು ಕೂಡ ಆಗಿದ್ದಳು. ಇಷ್ಟಿದ್ದರೂ ಹಿರಿಯರು ಏನಾದರೂ ಹೇಳುವರೇನೋ ಎಂದು ಇವರಿಬ್ಬರ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಗುತ್ತಿತ್ತು. ಮನೆಯವರು ತಪ್ಪನ್ನು ಗುರುತಿಸಿ ಹೇಳಿದರೆ ಅವರಿಬ್ಬರು ಏನೂ ಹೇಳದೆ ಅಲ್ಲಿಂದ ಕಂಬಿಕೀಳುತ್ತಿದ್ದರು.

(ಮೇಲೆ ಗೆರೆ ಎಳೆದ ಪದ ಪುಂಜಗಳನ್ನು **'ನುಡಿಗಟ್ಟು'** ಎನ್ನುತ್ತೇವೆ)

**ಋ. ಇಂಥಹ ನುಡಿಗಟ್ಟುಗಳನ್ನು ಸಂಗ್ರಹಿಸಿ, ಮೇಲಿನಂತೆ ಚಿಕ್ಕದಾದ ಕಥೆಯೊಂದನ್ನು ರಚಿಸಿ.**

@KTBS NOT TO BE REPUBLISHED

## ಎ. ಗಮನಿಸುತ್ತಾ ಅರ್ಥೈಸಿಕೊಳ್ಳಿ.

1. ಅಟ್ಟಕ್ಕೇರಿಸು – ಹೊಗಳಿ ಹೊಗಳಿ ಉಬ್ಬಿಸು
2. ಕಂಬಿಕೀಳು – ಹೇಳದೆ ಕೇಳದೆ ಓಡಿಹೋಗು
3. ಗುಬ್ಬಿಮೇಲೆ ಬ್ರಹ್ಮಾಸ್ತ್ರ – ಸಣ್ಣವರ ಮೇಲೆ ಬಲ ಪ್ರದರ್ಶನ.
4. ಅಡವಿ ಪಾಲಾಗು – ನಾಶವಾಗು
5. ಅವಲಕ್ಕಿ ಕುಟ್ಟಿದಂತಾಗು – ಎದೆ ಡವಡವ ಎಂದು ಹೊಡೆದುಕೊಳ್ಳು
6. ಅಜಗಜಾಂತರ – ತುಂಬಾ ಅಂತರ (ಆಡು ಮತ್ತು ಆನೆಗಿರುವಷ್ಟು)
7. ಇಂಗಿ ಹೋಗು – ಒಣಗು, ಸಂಪೂರ್ಣ ಹಾಳಾಗು
8. ಕಣಿ ಹೇಳು – ಗೊತ್ತಿರುವುದನ್ನು ಮತ್ತೆ ಮತ್ತೆ ಹೇಳು
9. ಪುಸ್ತಕದ ಹುಳು – ಸದಾಕಾಲ ಓದುವವ
10. ಕಂಗಾಲಾಗು – ಏನೂ ತೋಚದಾಗು, ದಯನೀಯ ಸ್ಥಿತಿ ತಲುಪು
11. ನೀರಿನ ಮೇಲೆ ಹೋಮ ಮಾಡಿದಂತೆ – ಭಾರೀ ದೊಡ್ಡ ಕೆಲಸ ಮಾಡಿದರೂ ಏನೂ ಪ್ರತಿಫಲ ದೊರಕದೆ ಹೋಗುವುದು

NOT TO BE REPUBLISHED @KTBS

### ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | 🙂 | 😐 | ☹ |
|---|---|---|---|---|
| 1. | ನುಡಿಗಟ್ಟುಗಳನ್ನು ಓದಿ ಅರ್ಥ ಮಾಡಿಕೊಳ್ಳುವೆ. | | | |
| 2. | ಸಂಭಾಷಣೆಯಲ್ಲಿ ಗಾದೆಗಳನ್ನು ಬಳಸುವೆ. | | | |
| 3. | ವಿಭಕ್ತಿ ಪ್ರತ್ಯಯ ಬಳಸಿ ವಾಕ್ಯ ರಚಿಸುವೆ. | | | |
| 4. | ಮುದ್ರಿತ ಕಥೆಯನ್ನು ಓದಿ ಅರ್ಥೈಸಿಕೊಳ್ಳುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

# 12. ಅಭ್ಯಾಸ

## ಅ. ಗೆರೆ ಎಳೆದ ನಮ್ಮನ್ನು ಗಮನಿಸಿ.

1. ಗುರುಗಳು ಶಾಲೆಗೆ ಹೊರಟರು. ಅವರು ಒಂದು ಪುಸ್ತಕವನ್ನು ಹಿಡಿದಿದ್ದರು.
2. ಮೋತಿ ವಿಜಯಳ ಪ್ರೀತಿಯ ನಾಯಿ. ಅದು ಅವಳಿಗೆ ಬಲು ಪ್ರಿಯ.
3. ವಿನಯ ಮತ್ತು ಮೂರ್ತಿ ಇಬ್ಬರು ಗೆಳೆಯರು. ಇವರು ಒಮ್ಮೆ ಪ್ರವಾಸಕ್ಕೆ ಹೊರಟರು.
4. ಹಕ್ಕಿಗಳಿಗೆ ರೆಕ್ಕೆಗಳು ಇರುತ್ತವೆ. ಅವು ಆಕಾಶದಲ್ಲಿ ಹಾರುತ್ತವೆ.
5. ರವಿಗೆ ಒಮ್ಮೆ ಆರೋಗ್ಯ ಕೆಟ್ಟಿತು. ಕೂಡಲೇ ಅವನು ವೈದ್ಯರಲ್ಲಿಗೆ ಹೋದನು.
6. ಲಲಿತಳು ವಿಜಯಳನ್ನು ಕೇಳಿದಳು, "ನೀವು ಯಾವಾಗ ಮೈಸೂರಿಗೆ ಹೋಗುವಿರಿ? ಎಂದು.

**ನಿಮಗಾಗಿ :**

ಅವರು, ಇವರು, ಅದು, ಇದು, ಅವಳು, ಇವಳು, ನೀನು, ನೀವು, ಅವಳಿಗೆ, ಇವಳಿಗೆ, ಅವನು, ಇವನು, ನಾನು, ನಾವು, ತಾವು ಇತ್ಯಾದಿ ಪದಗಳು ನಾಮಪದದ ಬದಲು ಅದೇ ಸ್ಥಾನದಲ್ಲಿದ್ದು ನಾಮಪದವನ್ನು ಸೂಚಿಸುವ ಪದಗಳು. ಇದನ್ನು **'ಸರ್ವನಾಮ'**ಗಳೆನ್ನುವರು.

@KTBS NOT TO BE REPUBLISHED

## ಆ. ಸರ್ವನಾಮಗಳನ್ನು ಬಳಸಿಕೊಂಡು ಆರು ವಾಕ್ಯಗಳನ್ನು ರಚಿಸಿ.

| |
|---|
| |
| |
| |
| |
| |
| |

## ಇ. ಓದಿ, ಜೋಡಿಸಿ/ಹೊಂದಿಸಿ ಬರೆಯಿರಿ.

| | | | | |
|---|---|---|---|---|
| **ಮಾದರಿ :** | ಸೋಲು | x | ಅಮೃತ | ಸೋಲು x ಗೆಲುವು |
| 1. | ಅಹಿಂಸೆ | x | ಪರ | |
| 2. | ಜೀರ್ಣ | x | ಅಪಜಯ | |
| 3. | ಜಯ | x | ಅನರ್ಥ | |
| 4. | ಅರ್ಥ | x | ನಕಲಿ | |
| 5. | ಇಹ | x | ನರಕ | |
| 6. | ಸ್ವರ್ಗ | x | ಅಪಕಾರ | |
| 7. | ಉತ್ತೀರ್ಣ | x | ಅಜೀರ್ಣ | |
| 8. | ಉಪಕಾರ | x | ಹಿಂಸೆ | |
| 9. | ವಿಷ | x | ಗೆಲುವು | |
| 10. | ಅಸಲಿ | x | ಅನುತ್ತೀರ್ಣ | |
| 11. | ಜೀವ | x | ಅಧಮ | |
| 12. | ಉತ್ತಮ | x | ನಿರ್ಜೀವ | |

ಅಬ್ಬಬ್ಬಾ ! ಏನಿವು ? ಇವು **'ವಿರುದ್ಧಾರ್ಥಕ ಪದಗಳು'**

@KTBS NOT TO BE REPUBLISHED

**ಈ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

1. ಸುರ X
2. ಆಸೆ X
3. ಹಗಲು X
4. ಉತ್ತರ X
5. ಉದ್ದ X
6. ಜನನ X
7. ಭಾರ X
8. ಲಾಭ X
9. ಸುಖ X
10. ಧರ್ಮ X
11. ಹೊಗಳು X
12. ಉದ್ಯೋಗ X
13. ಶಿಸ್ತು X
14. ದೂರ X
15. ಹಳತು X
16. ಹೊರಗೆ X
17. ಶುದ್ಧ X
18. ಪರ X
19. ಹಿಗ್ಗು X
20. ಸಹಕಾರ X

@KTBS NOT TO BE REPUBLISHED



## ಉ. ಸರಿಯಾದ ಪದವನ್ನು ✓(ಸರಿ) ಗುರುತಿನಿಂದ ಗುರುತಿಸಿ ಬರೆಯಿರಿ.

ಮಾದರಿ : ಆವು—ಹಾವು(✓) = ಹಾವು

| | | | |
|---|---|---|---|
| ಅಣ್ಣು— ಹಣ್ಣು = | | ಇಮಾನ —ವಿಮಾನ = | |
| ಅಸು — ಹಸು = | | ಹೆಣ್ಣು — ಹೆನ್ನು = | |
| ಆಲು— ಹಾಲು = | | ಬೆನ್ನು — ಬೆಣ್ಣು = | |
| ಹಗಲು —ಅಗಲು = | | ವಿಸ —ವಿಷ = | |
| ಹಸಿರು —ಅಸಿರು = | | ಸುದ್ದ — ಶುದ್ಧ = | |
| ಆರುವ —ಹಾರುವ = | | ಎರಡು —ಯರಡು = | |
| ಊವು— ಹೂವು = | | ಲಗ್ನ — ಲಗ್ಣ = | |
| ಒಂದು— ವಂದು = | | ಆಕಾಷ —ಆಕಾಶ = | |
| ಹೋಗು— ಓಗು = | | ವೇಶ — ವೇಷ = | |
| ಅಂಸ — ಹಂಸ = | | ಶಕ್ತಿ — ಸಕ್ತಿ = | |

@KTBS NOT TO BE REPUBLISHED

## ಊ. ಕೆಳಕಂಡ ಪದಗಳನ್ನು ಬಳಸಿ ವಾಕ್ಯ ರಚಿಸಿ.

1. ಪ್ರೇಕ್ಷಣೀಯ :
2. ಜೀವರಾಶಿ :
3. ಸೌಂದರ್ಯ :
4. ಅನುಭವ :
5. ಸಾರ್ವಜನಿಕ :
6. ಪಂಚಾಯಿತಿ :
7. ಏಕೀಕರಣ :
8. ಅಗ್ರಗಣ್ಯ :
9. ಘಟನೆ :
10. ಅಪ್ರಕೃತ :

@KTBS NOT TO BE REPUBLISHED

### ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಸರ್ವನಾಮಗಳನ್ನು ಬಳಸಿಕೊಂಡು ವಾಕ್ಯ ರಚಿಸುವೆ. | | | |
| 2. | ವಿರುದ್ಧ ಪದಗಳನ್ನು ಗುರುತಿಸಿ ಬರೆಯುವೆ. | | | |
| 3. | ಪದಗಳ ಅರ್ಥಗ್ರಹಿಸಿ ವಾಕ್ಯಗಳನ್ನು ಬರೆಯುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

## 13. ಕಿರು ಪರೀಕ್ಷೆ–3

**ಅ. 'ಅ' ವಿಭಾಗದ ಪದಗಳಿಗೆ 'ಆ' ವಿಭಾಗದಲ್ಲಿಯ ಸೂಕ್ತವಾದ' ಪದಗಳನ್ನು ಆರಿಸಿ ಬರೆಯಿರಿ.**

| | ಅ | ಆ | |
|---|---|---|---|
| 1. | ಶಾಲೆ | ಮರಗಳು | |
| 2. | ಹುಡುಗಿ | ಅಕ್ಕಂದಿರು | |
| 3. | ಮರ | ಶಾಲೆಗಳು | |
| 4. | ಅಕ್ಕ | ಮನೆಗಳು | |
| 5. | ಮನೆ | ಮಕ್ಕಳು | |
| 6. | ಮಗು | ಹುಡುಗಿಯರು | |

**ಆ. 1. ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಬದಲಾಯಿಸಿ.**

ರಶ್ಮಿಯು ನೃತ್ಯ ಮಾಡಿದಳು.

**2. ಈ ವಾಕ್ಯವನ್ನು ಭವಿಷ್ಯತ್ಕಾಲಕ್ಕೆ ಬದಲಾಯಿಸಿ.**

ಅಮ್ಮ ಅಡುಗೆ ಮಾಡುತ್ತಿದ್ದಾರೆ.

**3. ಈ ವಾಕ್ಯವನ್ನು ಭೂತಕಾಲಕ್ಕೆ ಬದಲಾಯಿಸಿ.**

ಮೂರ್ತಿಯು ಶಾಲೆಗೆ ಹೋಗುವನು.

ಅಪ್ಪ ಅಡುಗೆ ಮಾಡುತ್ತಿದ್ದಾನೆ.

@KTBS NOT TO BE REPUBLISHED

**ಇ. ಕೆಳಗಿನ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಾಗಿ ವಿಂಗಡಿಸಿ.**

ಬೆಳ್ಳಿ, ಪುಸ್ತಕ, ರಾಣಿ, ತಂದೆ, ಅಕ್ಕ, ಲತಾ, ಹುಡುಗ, ಕೆರೆ, ರಾಜು

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| | | |
| | | |
| | | |

**ಈ. ಕೆಳಗಿನ ಪದಗಳನ್ನು ರೂಢನಾಮ, ಅನ್ವರ್ಥನಾಮ, ಅಂಕಿತನಾಮಗಳಾಗಿ ವಿಂಗಡಿಸಿ.**

ರಾಧೆ, ಪರ್ವತ, ಮೂಗಿ, ಕಾವೇರಿ, ಊರು, ವಿದ್ವಾಂಸ, ಶಿಕ್ಷಕ, ರವಿ, ಮನೆ

| ರೂಢನಾಮ | ಅನ್ವರ್ಥನಾಮ | ಅಂಕಿತನಾಮ |
|---|---|---|
| | | |
| | | |
| | | |

©KTBS NOT TO BE REPUBLISHED

**ಉ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಕಾಡಿನಲ್ಲಿ = 

ಮಾತಿಲ್ಲ = 

ಗೌರಿಯಿಂದ = 

ಮರದಿಂದ = 

ಎಚ್ಚರವಾಗಿ = 

**ಏ. ಕೆಳಗಿನ ವಾಕ್ಯಗಳಿಗೆ ಬೇಕಾದ ಜಾಗದಲ್ಲಿ ಸರ್ವನಾಮ ಸೇರಿಸಿ ಬರೆಯಿರಿ.**

1. ಹಕ್ಕಿಗಳಿಗೆ ರೆಕ್ಕೆಗಳು ಇರುತ್ತವೆ. ಹಕ್ಕಿಗಳು ಆಕಾಶದಲ್ಲಿ ಹಾರುತ್ತವೆ.

2. ಗುರುಗಳು ಶಾಲೆಗೆ ಹೊರಟರು. ಗುರುಗಳು ಒಂದು ಪುಸ್ತಕವನ್ನು ಹಿಡಿದಿದ್ದರು.

3. ಮೋತಿ ವಿಜಯಳ ಪ್ರೀತಿಯ ನಾಯಿ. ಮೋತಿ ಅವಳಿಗೆ ಬಲುಪ್ರಿಯ.

**ಐ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

1. ಹೊಗಳು X
2. ಉತ್ತೀರ್ಣ X
3. ಉದ್ದ X
4. ಜಯ X
5. ಭಾರ X
6. ಉಪಕಾರ X

@KTBS NOT TO BE REPUBLISHED

**ಒ. ಕೊಟ್ಟ ಪದಗಳಲ್ಲಿ ಸರಿಯಾದ ಪದಗಳನ್ನು ಆರಿಸಿ ಬರೆಯಿರಿ.**

| | |
|---|---|
| 1. ಅಂಸ, ಹಂಸ = | 6.ದೇಸ, ದೇಶ = |
| 2. ಇಮಾನ, ವಿಮಾನ = | 7. ಭಾಷೆ, ಭಾಸೆ = |
| 3. ಹಸಿರು, ಅಸಿರು = | 8. ಆಸೆ, ಹಾಸೆ = |
| 4. ಆಲು, ಹಾಲು = | 9. ಪಕ್ಷಿ, ಪಕ್ಸಿ = |
| 5. ಹೋಗು, ಓಗು = | 10.ಕನ್ನಡ, ಖನ್ನಡ = |

## 14. ಅಭ್ಯಾಸ

ಅ. ಕನ್ನಡ ಸಂಧಿಪದಗಳನ್ನು ಹೇಳುತ್ತಾ ಬರೆಯಿರಿ.

**ಅ.** 1. ನಾವು + ಎಲ್ಲಾ = ನಾವೆಲ್ಲಾ

2. ಅವನ + ಅಲ್ಲಿ = ಅವನಲ್ಲಿ

3. ಮಾತು + ಇಲ್ಲ = ಮಾತಿಲ್ಲ

4. ಅಲ್ಲಿ + ಅಲ್ಲಿ = ಅಲ್ಲಲ್ಲಿ

5. ಮಾಡು + ಇಸು = ಮಾಡಿಸು

**ಆ.** 1. ಮನೆ + ಅನ್ನು = ಮನೆಯನ್ನು

2. ನದಿ + ಅಲ್ಲಿ = ನದಿಯಲ್ಲಿ

3. ಹುಲಿ + ಇಂದ = ಹುಲಿಯಿಂದ

4. ಗುರು+ಇಗೆ = ಗುರುವಿಗೆ

5. ಆರಂಭ+ಆಗು=ಆರಂಭವಾಗು

**ಇ.** 1. ಮೈ+ತೊಳೆ = ಮೈದೊಳೆ

2. ಬೆಟ್ಟ+ತಾವರೆ = ಬೆಟ್ಟದಾವರೆ

3. ಕಣ್+ಪನಿ = ಕಂಬನಿ

4. ಮಳೆ+ಕಾಲ = ಮಳೆಗಾಲ

5. ಹೊಸ+ಕನ್ನಡ=ಹೊಸಗನ್ನಡ

@KTBS NOT TO BE REPUBLISHED

**ಹೆಚ್ಚಿನ ಮಾಹಿತಿಗಾಗಿ :**




NOT TO BE REPUBLISHED ©KTBS

**ಕನ್ನಡ ಸಂಧಿಗಳು :**

1. ಆದೇಶ ಸಂಧಿ
2. ಆಗಮ ಸಂಧಿ
3. ಲೋಪಸಂಧಿ



ಆ. ಸಂಸ್ಕೃತ ಸಂಧಿಪದಗಳನ್ನು ಹೇಳುತ್ತಾ ಬರೆಯಿರಿ.

**ಅ.** 1. ಸುರ + ಅಸುರ = ಸುರಾಸುರ

2. ಗುರು + ಉಪದೇಶ = ಗುರೂಪದೇಶ

3. ರವಿ + ಇಂದ್ರ = ರವೀಂದ್ರ

4. ಗಿರಿ + ಈಶ = ಗಿರೀಶ

**ಆ.** 1. ಸುರ + ಇಂದ್ರ = ಸುರೇಂದ್ರ

2. ಚಂದ್ರ + ಉದಯ = ಚಂದ್ರೋದಯ

3. ಮಹ + ಋಷಿ = ಮಹರ್ಷಿ

4. ಮಹ + ಈಶ್ವರ = ಮಹೇಶ್ವರ

**ಇ.** 1. ಶಿವ + ಐಕ್ಯ = ಶಿವೈಕ್ಯ

2. ವನ + ಔಷಧ = ವನೌಷಧ

3. ಏಕ + ಏಕ = ಏಕೈಕ

4. ಅಷ್ಟ + ಐಶ್ವರ್ಯ = ಅಷ್ಟೈಶ್ವರ್ಯ

**ಈ.** 1. ಇತಿ + ಆದಿ = ಇತ್ಯಾದಿ

2. ಅತಿ + ಅಂತ = ಅತ್ಯಂತ

3. ಜಾತಿ + ಅತೀತ = ಜಾತ್ಯಾತೀತ

4. ಅತಿ + ಉತ್ತಮ = ಅತ್ಯುತ್ತಮ

@KTBS NOT TO BE REPUBLISHED

**ಹೆಚ್ಚಿನ ಮಾಹಿತಿಗಾಗಿ :**




NOT TO BE REPUBLISHED ©KTBS

**ಸಂಸ್ಕೃತ ಸಂಧಿಗಳು :**

1. ಸವರ್ಣದೀರ್ಘ ಸಂಧಿ
2. ಗುಣ ಸಂಧಿ
3. ಯಣ್ ಸಂಧಿ
4. ವೃದ್ಧಿ ಸಂಧಿ



## ಇ. ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ.

**ಮಾದರಿ :** ನದಿ + ಅಲ್ಲಿ = ನದಿಯಲ್ಲಿ – ಆಗಮಸಂಧಿ

1. ನಾವೆಲ್ಲಾ =
2. ಮನೆಯನ್ನು =
3. ದೇವಾಲಯ =
4. ಬೆಟ್ಟದಾವರೆ =
5. ಅತ್ಯಂತ =
6. ಕಂಬನಿ =
7. ಏಕೈಕ =
8. ವಾಗೀಶ =
9. ಷಣ್ಮುಖ =
10. ಸಚ್ಚಿತ್ರ =

@KTBS NOT TO BE REPUBLISHED

## ಈ. ಕೂಡಿಸಿ ಬರೆದು ಸಂಧಿ ಹೆಸರನ್ನು ಬರೆಯಿರಿ.

**ಮಾದರಿ :** ಸತ್ + ಮಾನ = ಸನ್ಮಾನ – ಶ್ಚುತ್ವ ಸಂಧಿ

1. ಚಿತ್+ಆನಂದ =
2. ಷಟ್+ಆನನ =
3. ಚಿತ್+ಮಯ =
4. ಶಿವ+ಐಕ್ಯ =

| |
|---|
| 5. ಮಹ+ಋಷಿ = |
| 6. ಗುರು+ಉಪದೇಶ = |
| 7. ವನ+ಔಷಧ = |
| 8. ಮಾಡು+ಇಸು = |
| 9. ನದಿ+ಇಂದ = |
| 10. ಹೊಸ+ಕನ್ನಡ = |

## ಪ್ರಕೃತಿ ಭಾವ :

**ಪ್ಲುತ ಸ್ವರದ ಮುಂದೆ ಸ್ವರ ಬಂದಾಗ;** ಅಯ್ಯೋ, ಆಹಾ, ಓಹೋ ಮುಂತಾದ ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ ಹಾಗೂ **ಆ** ಎಂಬ ಪದದ ಮುಂದೆ (ಅಕ್ಷರದ ಮುಂದೆ ಅಲ್ಲ) **ಸ್ವರ ಬಂದಾಗ** ಸಂಧಿ ಮಾಡಬಾರದು. ಹೀಗೆ – **ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇದ್ದ ಹಾಗೆಯೇ ಇರುವುದು 'ಪ್ರಕೃತಿಭಾವ.'**

**ಉದಾ :** ಆ + ಆಡು, ಅಯ್ಯೋ +ಇದೇನು, ಓಹೋ + ಅಜ್ಜಿ ಬಂದರೇ

NOT TO BE REPUBLISHED © KTBS

### ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಕನ್ನಡ ಸಂಧಿಗಳನ್ನು ಗುರುತಿಸಿ ಹೇಳುವೆ. | | | |
| 2. | ಸಂಸ್ಕೃತ ಸಂಧಿಗಳನ್ನು ಬಿಡಿಸಿ ಬರೆಯುವೆ. | | | |
| 3. | ಒಗಟುಗಳನ್ನು ಅರ್ಥೈಸಿಕೊಂಡು ಸ್ವಾರಸ್ಯವನ್ನು ಹೇಳುವೆ. | | | |

| | | | | | | |
|---|---|---|---|---|---|---|
| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |

# 15. ಅಭ್ಯಾಸ

**ಅ. ನಾನು ಆಚೆ ಈಚೆ ಆಗಿರುವೆ. ಮಾದರಿಯಂತೆ ಸರಿಯಾಗಿ ಬರೆಯಿರಿ.**

**ಮಾದರಿ :** ಒಂದು/ಅರಣ್ಯವಿತ್ತು/ಒಂದಾನೊಂದು/ದಟ್ಟವಾದ/ಕಾಲದಲ್ಲಿ

ಒಂದಾನೊಂದು ಕಾಲದಲ್ಲಿ ಒಂದು ದಟ್ಟವಾದ ಅರಣ್ಯವಿತ್ತು.

1. ಬಹಳ / ನಮ್ಮ / ಒಳ್ಳೆಯವರು / ನೆರೆಹೊರೆಯವರು

2. ಧರಿಸುತ್ತಾರೆ / ವಿಧವಿಧವಾದ / ಉಡುಗೆ ತೊಡುಗೆ / ನಾಟಕದಲ್ಲಿ

3. ಆಭರಣ / ಮನುಷ್ಯನ / ಗುಣಗಳೇ / ಮಾನವೀಯ

4. ಅಭ್ಯಾಸವೇ / ಹಾದಿ / ಸತತ / ಸಾಧನೆಗೆ

5. ನನಸು / ಕನಸುಗಳನ್ನು / ಕಟ್ಟಿ / ಮಾಡಬೇಕು

6. ಪಾಠವನ್ನು / ನಗುನಗುತ್ತ / ಮಕ್ಕಳು / ಕೇಳಿದರು

7. ನದಿಯ ದಡದಲ್ಲಿ / ಮಾತನಾಡುತ್ತಾ / ಕುಳಿತಿದ್ದರು / ಮೂವರು ಗೆಳೆಯರು

8. ಸುಂದರವಾದ / ಮೂರ್ತಿಗಳು / ಕಗ್ಗಲ್ಲಿನಲ್ಲಿ / ಅರಳುತ್ತವೆ

9. ಸ್ವಾತಂತ್ರ್ಯವನ್ನು / ತಂದುಕೊಟ್ಟರು / ಗಾಂಧೀಜಿಯವರು / ನಮಗೆ

10. ದಿಕ್ಕಿನಲ್ಲಿದೆ / ಭಾರತದ / ಕರ್ನಾಟಕವು / ದಕ್ಷಿಣ

©KTBS NOT TO BE REPUBLISHED

**ಆ. ನಾನು ಮತ್ತು ನನ್ನವರನ್ನು ಒಂದು ಮಾಡಲು ಮಾದರಿಯಂತೆ ಬರೆಯಿರಿ.**

**ಮಾದರಿ :**




ಭೂಮಿ = ಪೃಥ್ವಿ, ಇಳೆ, ಧರೆ, ಧರಿತ್ರಿ, ಅವನಿ

1.




2.




3.




4.




5.




@KTBS
NOT TO BE REPUBLISHED

6.




7.




8.




9.




10.




ನಾವೇನು ತಿಳಿದೆವು ? ಒಂದು ಪದಕ್ಕೆ ಅದೇ ಅರ್ಥವನ್ನು ನೀಡುವ ಅನೇಕ ಪದಗಳಿವೆ. ಇವು **''ಸಮಾನಾರ್ಥಕ ಪದಗಳು''**

@KTBS NOT TO BE REPUBLISHED

# ನ್ಯಾಯ

## ಇ. ಚಿತ್ರ ಸಹಿತ ಕಥೆ ಓದಿ ಬರೆಯಿರಿ.

ಒಂದು ಊರು ಆ  ನಲ್ಲಿ ಒಂದು  ಮತ್ತು ಒಂದು  ಅನ್ಯೋನ್ಯವಾಗಿದ್ದವು. ಅವು ದಿನವು ಜೊತೆಯಲ್ಲಿ  ವನ್ನು ಹುಡುಕಲು ಹೋಗುತ್ತಿದ್ದವು. ಹೀಗೆ  ದಿನ  ಯಿಂದ  ಗೆ  ಹುಡುಕಿಕೊಂಡು ಹೊರಟವು. ಒಂದು  ಯಲ್ಲಿ  ಸಿಕ್ಕಿತು. ಅದರಲ್ಲಿ  ಮತ್ತು  ತಮಗೆ ಸಮಪಾಲು ಬೇಕೆಂದು ಹಠ ಹಿಡಿದವು. ಇದಕ್ಕೆ ನ್ಯಾಯ ಹುಡುಕಲು ಅವು  ಯನ್ನು ಹೊತ್ತು ಹೊರಗೆ ನಡೆದವು.  ಯಲ್ಲಿ ಒಂದು  ವಿತ್ತು.  ದ ಮೇಲೆ  ಯೊಂದು  ಯನ್ನು ಹಿಡಿದು ಕೊಂಡು ಕುಳಿತಿತ್ತು.  ಮತ್ತು  ಆ  ಯಲ್ಲಿ ತೂಗಿ ತಮಗೆ  ಯನ್ನು ಸಮವಾಗಿ ಹಂಚುವಂತೆ  ಯನ್ನು ಕೇಳಿದವು.  ದೋಸೆಯನ್ನು  ಭಾಗಮಾಡಿ  ಯ ತಟ್ಟೆಗೆ ಹಾಕಿತು.  ಒಂದು ಭಾಗ ಮೇಲೆ ಹೋಯಿತು. ಇನ್ನೊಂದು ಭಾಗ ಕೆಳಗೆ ಬಂದಿತು. ಕೆಳಗೆ ಬಂದ  ಯಲ್ಲಿ ಹೆಚ್ಚು  ಇದೆ ಎಂದು   ಯನ್ನು ಮುರಿದು ತಿಂದಿತು. ಮತ್ತೆ ತೂಗಿತು  ಮೇಲೆ ಕೆಳಗಾಯಿತು. ಮತ್ತೆ  ಯನ್ನು ಮುರಿದು ತಿಂದಿತು. ಹೀಗೆ ಮಾಡುತ್ತಾ ಪೂರ್ತಿ   ಯ ಪಾಲಾಯಿತು  ಮತ್ತು  ಗಳು ಸಪ್ಪೆ ಮೋರೆ ಹೊತ್ತು  ಗೆ ನಡೆದವು.

© KTBS NOT TO BE REPUBLISHED

**ಓದಿದ ''ನ್ಯಾಯ'' ಚಿತ್ರಕಥೆಯನ್ನು ಈಗ ನೀವೇ ಸ್ವತಂತ್ರವಾಗಿ ಬರೆಯಿರಿ.**

@KTBS
NOT TO BE REPUBLISHED

**ಈ. ಚಿತ್ರ ನೋಡಿ ಕಥೆ ಕಟ್ಟಿ.**









@KTBS NOT TO BE REPUBLISHED

**ನಮ್ಮ ಆಶಯ :** ಮೇಲಿನ ಚಿತ್ರಗಳನ್ನು ಒಂದಾದ ಮೇಲೆ ಒಂದರಂತೆ ಹಲವು ಸಲ ಗಮನಿಸಿ ಬಣ್ಣ ತುಂಬಿರಿ. ನಂತರ ಅಲ್ಲಿನ ಸನ್ನಿವೇಶವನ್ನಾಧರಿಸಿ ಮುಂದಿನ ಪುಟದಲ್ಲಿ ಈ ಕಥೆಯನ್ನು ಬರೆಯಿರಿ.

## ಕಥೆ



@KTBS
NOT TO BE REPUBLISHED

## ಉ. ಆವರಣದೊಳಗಿರುವ ಪದಗಳನ್ನು ಬಳಸಿ ಕಥೆಯನ್ನು ಪೂರ್ಣಗೊಳಿಸಿ .

ತೋಟ, ಹಣ್ಣು, ಕೊಡಲಿ, ಮನಕರಗಿತು, ಮೌಲ್ಯ, ಸ್ನೇಹಿತನೂ, ಸಲಹೆ, ಪಕ್ಷಿಗಳು, ಧನ್ಯವಾದ, ಕಡಿದು, ಜೇನು ಹುಳುಗಳು, ರೈತ

ಒಂದು ಸಣ್ಣ ಹಳ್ಳಿಯಲ್ಲಿ ಒಬ್ಬ ............. ಇದ್ದನು. ಅವನು ಒಂದು ದೊಡ್ಡ ಹಣ್ಣಿನ .............ವನ್ನು ಮಾಡಿದ್ದ. ಆ ತೋಟದ ತುಂಬ ಹಲವು ಜಾತಿಯ ಹಣ್ಣಿನ ಮರಗಳಿದ್ದವು. ಒಂದು ದಿನ ಆ ತೋಟಕ್ಕೆ ರೈತನೊಂದಿಗೆ ಆತನ ............. ಬಂದನು. ಅವನು ಎಲ್ಲಾ ಮರಗಳನ್ನೂ ಗಮನಿಸುತ್ತಾ ಇದ್ದಾಗ ............. ಬಿಡದಿರುವ ಒಂದು ಮರವನ್ನು ಕಂಡನು. ಅದನ್ನು ನೋಡಿದ ಸ್ನೇಹಿತ ಆ ಮರವನ್ನು............. ಹಾಕುವಂತೆ ರೈತನಿಗೆ ............. ನೀಡಿದ.

@KTBS NOT TO BE REPUBLISHED

ಮರುದಿನ ರೈತ ಮರಕಡಿಯಲು.............ಯನ್ನು ಹಿಡಿದು ತಂದ. ಆ ಮರದ ಮೇಲೆ ಹಲವು ............. ಗೂಡುಕಟ್ಟಿ ವಾಸ ಮಾಡುತ್ತಿದ್ದವು ಮತ್ತು .............ಗೂಡು ಕಟ್ಟಿಕೊಂಡಿದ್ದವು. ರೈತ ಮರಕಡಿಯಲು ಪ್ರಾರಂಭಿಸುತ್ತಿದ್ದಂತೆ ಪಕ್ಷಿಗಳು, ಜೇನುಹುಳುಗಳು ಮರ ಕಡಿಯದಿರುವಂತೆ ಬೇಡಿಕೊಂಡವು. ಅವುಗಳ ಬೇಡಿಕೆಯನ್ನು ಕೇಳಿ ರೈತನ .................. ರೈತ ಮರಕಡಿಯುವುದನ್ನು ನಿಲ್ಲಿಸಿದ. ಪಕ್ಷಿಗಳಿಗೂ, ಜೇನು ನೊಣಗಳಿಗೂ ತುಂಬಾ ಸಂತೋಷವಾಯಿತು. ಅವು ರೈತನಿಗೆ ............. ಹೇಳಿದವು.

# ಕನಸುಗಾರ ಕಲಾಂ



ಪ್ರಸಿದ್ಧ ಮೂಳೆ ತಜ್ಞರೊಬ್ಬರು ವಿಜ್ಞಾನಿಯೊಬ್ಬರ ಪ್ರಯೋಗಾಲಯಕ್ಕೆ ಭೇಟಿ ಕೊಟ್ಟರು. ವಿಜ್ಞಾನಿ ತನ್ನ ಪ್ರಯೋಗಾಲಯದಲ್ಲಿದ್ದ ವಸ್ತುಗಳನ್ನು ಒಂದೊಂದಾಗಿ ತೋರಿಸುತ್ತಾ ವಿವರಿಸಿದರು. ಕ್ಷಿಪಣಿಯಲ್ಲಿ ಬಳಸುವುದಕ್ಕಾಗಿ ತಾನು ತಯಾರಿಸಿದ ಹಗುರವಾದ ವಸ್ತುವೊಂದನ್ನು ಹೆಮ್ಮೆಯಿಂದ ತೋರಿಸಿದರು. ಅದನ್ನು ಮೂಳೆ ತಜ್ಞರು ಕೈಯಿಂದ ಎತ್ತಿ 'ಬಲು ಹಗುರ!' ಎಂದು ಉದ್ಗರಿಸಿದರು. ಒಡನೆಯೆ ವಿಜ್ಞಾನಿಯನ್ನು ಹೈದರಾಬಾದಿನಲ್ಲಿರುವ ತಮ್ಮ 'ನಿಜಾಮ್' ಆಸ್ಪತ್ರೆಗೆ ಬರುವಂತೆ ಕೇಳಿಕೊಂಡರು. ಅಂದೆ ಜೊತೆಯಲ್ಲಿ ಕರೆದುಕೊಂಡು ಹೋದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳನ್ನು ತೋರಿಸಿದರು. ಅಲ್ಲಿದ್ದವರಲ್ಲಿ ಹೆಚ್ಚಿನವರು ಮಕ್ಕಳು. ಅವರಲ್ಲಿ ಕೆಲವರು ಬೇರೆ ಬೇರೆ ಕಾರಣಗಳಿಂದ ಕಾಲಿನ ನ್ಯೂನತೆಗೆ ಒಳಗಾಗಿದ್ದರು. ಅವರ ಕಾಲಿಗೆ ಸುಮಾರು ಮೂರು ಕಿಲೋ ಗ್ರಾಂ ತೂಕದ ಲೋಹದ ಕ್ಯಾಲಿಪರ್ ಅಳವಡಿಸಿದ್ದರು.

ಆ ಭಾರವಾದ ಕಾಲನ್ನು ಎತ್ತಿ ಇಟ್ಟು ನಡೆಯಲು ಅವರು ಬಲು ಕಷ್ಟಪಡುತ್ತಿದ್ದರು. "ಇವರ ಕಷ್ಟವನ್ನು ನಿವಾರಿಸಲು ನಿಮ್ಮಿಂದ ಸಾಧ್ಯವಿಲ್ಲವೆ?" ಎಂದು ವೈದ್ಯರು ವಿಜ್ಞಾನಿಯನ್ನು ಪ್ರಶ್ನಿಸಿದರು.

ರೋಗಿಗಳ ವೇದನೆ, ವೈದ್ಯನ ಕಳಕಳಿ ವಿಜ್ಞಾನಿಯ ಮನ ಕಲಕಿತು. 'ಜನರ ನೆರವಿಗೆ ಬಾರದ ವಿಜ್ಞಾನ, ತಂತ್ರಜ್ಞಾನಕ್ಕೆ ಏನು ಅರ್ಥವಿದೆ?' ಎನ್ನಿಸಿತು. ಆ ಕ್ಷಣದಿಂದಲೇ ಅದರ ಬಗ್ಗೆ ಚಿಂತಿಸುತ್ತಾ ಹಿಂದಿರುಗಿದರು. ಸತತ ಮೂರು ವಾರಗಳ ಕಾಲ ಇದಕ್ಕಾಗಿ ಶ್ರಮಿಸಿದರು. ಹೊಸ ಕ್ಯಾಲಿಪರ್ ತಯಾರಿಸಿದರು. ಇದು ಕೇವಲ ೩೦೦ ಗ್ರಾಂ ತೂಕವಿತ್ತು. ತಯಾರಾದ ತಕ್ಷಣ ಲಗುಬಗೆಯಿಂದ ನಿಜಾಮ್ ಆಸ್ಪತ್ರೆಗೆ ಒಯ್ದರು.

ವೈದ್ಯರು ಅದನ್ನು ಪರೀಕ್ಷಿಸಿ ಒಬ್ಬ ಹುಡುಗನಿಗೆ ಅಳವಡಿಸಿದರು. ಅವನು ಹೆಜ್ಜೆ ಇಟ್ಟು ನಡೆದನು.

ಅವನ ಕಣ್ಣಲ್ಲಿನ ಆನಂದ ಕಂಡು ವೈದ್ಯರ ಹೃದಯ ತುಂಬಿ ಬಂದಿತು. ವಿಜ್ಞಾನಿಯ ಆನಂದಕ್ಕೆ ಪಾರವೇ ಇರಲಿಲ್ಲ. ಇಂತಹ ಮಾನವೀಯತೆ ಮೆರೆದ ವಿಜ್ಞಾನಿ ಯಾರು ಗೊತ್ತೇ? ಅವರೇ ನಮ್ಮ ಹೆಮ್ಮೆಯ ರಾಷ್ಟ್ರಪತಿಯಾಗಿದ್ದ ಎ.ಪಿ.ಜೆ. ಅಬ್ದುಲ್ ಕಲಾಂ.

ಅಬ್ದುಲ್ ಕಲಾಂ ತಮಿಳುನಾಡಿನ ರಾಮೇಶ್ವರಂ ಎಂಬ ಹಳ್ಳಿಯಲ್ಲಿ ಜನಿಸಿದ ಕನಸುಗಾರ. ಬಾಲಕರಿದ್ದಾಗ ಕಡಲ ತೀರದಲ್ಲಿ ಕುಳಿತು ಪರಿಸರವನ್ನು ವೀಕ್ಷಿಸುತ್ತಿದ್ದರು. ದಡದಲ್ಲಿದ್ದ ಹಕ್ಕಿಗಳು ನೆಲದಿಂದ ಮೇಲಕ್ಕೆ ಹಾರುತ್ತಿದ್ದವು. ಪಟಪಟನೆ ರೆಕ್ಕೆ ಬಡಿದು ಒಂದು ಕ್ಷಣ ಹಾಗೆಯೇ ತೇಲುತ್ತಿದ್ದವು. ಮತ್ತೆ ಹಾರುತ್ತಿದ್ದವು. ಇದನ್ನು ಕಂಡು 'ಮುಂದೊಂದು ದಿನ ನಾನು ಆಕಾಶದಲ್ಲಿ ಇವುಗಳಂತೆ ಹಾರಾಡುತ್ತೇನೆ' ಎಂದು ಕನಸು ಕಾಣುತ್ತಿದ್ದರು.

@KTBS NOT TO BE REPUBLISHED

## ಊ. ಗದ್ಯವನ್ನು ಓದಿ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.

1. ಪ್ರಯೋಗಾಲಯಕ್ಕೆ ಭೇಟಿ ಕೊಟ್ಟವರು ಯಾರು ?

2. ವಿಜ್ಞಾನಿಯನ್ನು ವೈದ್ಯರು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರು ?

3. ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಏನಾಗಿತ್ತು?

4. ರೋಗಿಗಳ ಕಾಲಿಗೆ ಏನನ್ನು ಅಳವಡಿಸಲಾಗಿತ್ತು ?

5. ನೀವು ಕಂಡ ಕನಸು ನಿಮಗೆ ನೆನಪಿದೆಯೇ? ಹಾಗಿದ್ದರೆ ಅದರ ಸಾರಾಂಶವನ್ನು ಬರೆಯಿರಿ.

@KTBS NOT TO BE REPUBLISHED

ಋ. ಕೆಳಗಿನವುಗಳನ್ನು ಗಮನಿಸಿ. ಅನುಕೂಲ ಹಾಗೂ ಅನಾನುಕೂಲಗಳನ್ನು ಬರೆಯಿರಿ.

| | ಅನುಕೂಲ | ಅನಾನುಕೂಲ |
|---|---|---|
| ದೂರದರ್ಶನ | ೧. ..............................<br>೨. ..............................<br>೩. .............................. | ೧. ..............................<br>೨. ..............................<br>೩. .............................. |
| ಮೊಬೈಲ್ | ೧. ..............................<br>೨. ..............................<br>೩. .............................. | ೧. ..............................<br>೨. ..............................<br>೩. .............................. |

ಎ. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸಿ ಬರೆಯಿರಿ.

| | | |
|---|---|---|
| ರೈತರು | ಪುಸ್ತಕವನ್ನು | ಆಳಿದರು |
| ಮಕ್ಕಳು | ರಾಜ್ಯವನ್ನು | ಕೆತ್ತಿದರು |
| ಗುರುಗಳು | ತೋಟವನ್ನು | ಹಾಡಿದರು |
| ಶಿಲ್ಪಿಗಳು | ಹಾಡನ್ನು | ಓದಿದರು |
| ರಾಜರು | ವಿಗ್ರಹಗಳನ್ನು | ಅಗೆದರು |

**ಮಾದರಿ :** ರೈತರು ತೋಟವನ್ನು ಅಗೆದರು.

©KTBS NOT TO BE REPUBLISHED

**ಏ. ಮಾದರಿಯಂತೆ ಸೂಕ್ತ ಪದ ರಚಿಸಿ.**

**ಮಾದರಿ :**

| ಪಡೆದನು | ಪಡೆಯುತ್ತಾನೆ | ಪಡೆಯುವನು |
|---|---|---|
| ನಡೆದನು | | |
| ಹಾರಿದನು | | |
| ಬರೆದನು | | |
| ಓಡಿದನು | | |

**ಐ. ಈ ಮಾದರಿಯಂತೆ ಕೊಟ್ಟಿರುವ ಪದಗಳಿಗೆ ಭಿನ್ನ ಅರ್ಥದಲ್ಲಿ ಸ್ವಂತ ವಾಕ್ಯ ಬರೆಯಿರಿ.**

**ಮಾದರಿ :** ಅತ್ತೆ – ನಾನು ಕಾಲಿಗೆ ಮುಳ್ಳು ಚುಚ್ಚಿದಾಗ ಅತ್ತೆನು.

ಅತ್ತೆ – ನಮ್ಮ ಅತ್ತೆ ನನಗೆ ಹೊಸ ಬಟ್ಟೆ ತಂದರು.

೧. ತಂದೆ : ____________________

ತಂದೆ : ____________________

೨. ಕಳೆ : ____________________

ಕಳೆ : ____________________

೩. ಆಡು : ____________________

ಆಡು : ____________________

@KTBS NOT TO BE REPUBLISHED

**ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನ**

| ಕ್ರ.ಸಂ. | ಕಲಿಕಾ ಸೂಚಕಗಳು | ☺ | 😐 | ☹ |
|---|---|---|---|---|
| 1. | ಚಿತ್ರಗಳನ್ನು ನೋಡಿ ಸಣ್ಣ ಕಥೆಗಳನ್ನು ಬರೆಯುವೆ. | | | |
| 2. | ಕಥೆ ಓದಿ ಕೇಳುವ ಪ್ರಶ್ನೆಗಳಿಗೆ ಉತ್ತರಿಸುವೆ. | | | |

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |
|---|---|---|---|---|---|---|

## 16. ಕಿರು ಪರೀಕ್ಷೆ–4

### ಅ. ನೀನು ಆಡುವ ಕ್ರೀಡೆ / ಆಟಗಳನ್ನು ಚೌಕದಲ್ಲಿ ಬರೆಯಿರಿ.

| | | |
|---|---|---|
| | | |
| | | |
| | | |

### ಆ. ಮಾದರಿಯಂತೆ ಪದ ಬಳ್ಳಿ ರಚಿಸಿ.

| ಮಾದರಿ : ಮರ–ರಸ–ಸರ–ರಥ–ಥರಥರ–ರಜತ–ತವರು–ರುಮಾಲು |
|---|
| ಜನಕ : |
| ವನಜ : |
| ಭವನ : |

@KTBS NOT TO BE REPUBLISHED

### ಇ. ಒಗಟು ಬಿಡಿಸಿ ಉತ್ತರ ಬರೆಯಿರಿ.

1. ಚೋಟುದ್ದ ಹುಡುಗಿಗೆ, ಮಾರುದ್ದ ಜಡೆ
2. ಚಿಕ್ಕ ಬೋರನಿಗೆ ಬಗಲಲ್ಲಿ ಕತ್ತಿ
3. ಒಂಟಿ ಕಾಲು ಕೊಕ್ಕರೆ ಒಂಭೈನೂರು ತತ್ತಿ

### ಈ. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ.

1. ಯೋಚಿಸು
2. ಸಮರ್ಥ

| ಶಿಕ್ಷಕರ ಅಭಿಪ್ರಾಯ | | ಅತ್ಯುತ್ತಮ | | ಉತ್ತಮ | | ಸಾಧಾರಣ |
|---|---|---|---|---|---|---|

❖ ❖ ❖

**Note :**

@KTBS
NOT TO BE REPUBLISHED